# ಗಮಕ ದುಂದುಭಿ

ಪರಿಷತ್ತಿನ ತ್ರೈಮಾಸಿಕ ಪತ್ರಿಕೆ

ಸಂಪುಟ: 34 ಸಂಚಿಕೆ: 02 ಏಪ್ರಿಲ್ – ಜೂನ್ 2018



ಕುಮಾರವ್ಯಾಸ ಜಯಂತಿಯಂದು ಲೋಕಾರ್ಪಣೆಗೊಂಡ ಹೊಸರೂಪದ 'ಗಮಕ ದುಂದುಭಿ' ತ್ರೈಮಾಸಿಕ ಪತ್ರಿಕೆ



ಗಮಕ ಕಲಾ ಪರಿಷತ್ತಿನ ನೂತನ ಕಛೇರಿಯು ಬಿ.ಎಂ.ಶ್ರೀ. ಪ್ರತಿಷ್ಠಾನದ ಭವನಕ್ಕೆ ಸ್ಥಳಾಂತರಗೊಂಡ ಸಂದರ್ಭದಲ್ಲಿ ಅದರ ಅಧ್ಯಕ್ಷರಾದ ಶ್ರೀಯುತ ಪಿ.ವಿ. ನಾರಾಯಣ ಅವರನ್ನು ಗೌರವಿಸಿದ ಸಂದರ್ಭ

# ವಿವಿಧೆಡೆಯಲ್ಲಿ ನಡೆದ ಗಮಕ ಕಾರ್ಯಕ್ರಮಗಳು


















# ಗಮಕ ದುಂದುಭಿಯ ಒಡಲಾಳದಲ್ಲಿ

**ಗೌರವ ಸಂಪಾದಕರು**

ಕರ್ನಾಟಕ ಕಲಾಶ್ರೀ ಗಂಗಮ್ಮ ಕೇಶವಮೂರ್ತಿ
ಮೊ : 8884672716

**ಸಂಪಾದಕರು**

ವಿದ್ವಾನ್ ಕೃ.ಪಾ. ಮಂಜುನಾಥ್
ಮೊ : 9341392624

**ಸಂಪಾದಕ ಸಲಹಾ ಮಂಡಳಿ**

ವಿದುಷಿ ಶ್ರೀಮತಿ ಶಾಂತಾ ಗೋಪಾಲ್
ವಿದ್ವಾನ್ ತೆಕ್ಕೆಕೆರೆ ಸುಬ್ರಹ್ಮಣ್ಯ ಭಟ್
ವಿದ್ವಾನ್ ಡಾ. ರಾಜೀವ ಲೋಚನ
ವಿದುಷಿ ಶ್ರೀಮತಿ ಸುಜಾತ ಗೋಪಿನಾಥ್

**ಕಛೇರಿ:**

**ಕರ್ನಾಟಕ ಗಮಕ ಕಲಾ ಪರಿಷತ್ತು (ರಿ)**
2ನೇ ಮಹಡಿ, ಬಿ.ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ,
3ನೇ ಮುಖ್ಯರಸ್ತೆ, ಎನ್. ಆರ್. ಕಾಲೋನಿ,
ಬೆಂಗಳೂರು - 560 019.

E-mail Id:
gamakadundubhi@gmail.com
karnatakagamakakalaparishat@gmail.com
Website:
www.karnatakagamakakala.org

**ಮುದ್ರಕರು:**

**ಶ್ರೀ ಅನ್ನಪೂರ್ಣ ಆಫ್‌ಸೆಟ್ ಪ್ರಿಂಟರ್ಸ್**
511, 14ನೇ ಮುಖ್ಯರಸ್ತೆ, ಸರಸ್ವತಿಪುರಂ
ಮೈಸೂರು–570 009
ದೂರವಾಣಿ: 0821–4264341

## ಪರಿವಿಡಿ

| | ಪುಟ ಸಂಖ್ಯೆ |
|---|---|
| ಅಧ್ಯಕ್ಷರ ಲೇಖನಿಯಿಂದ.... | 2 |
| ಸಂಪಾದಕೀಯ... | 3 |
| ಅರ್ಥಪೂರ್ಣವಾಗಿ ನೆರವೇರಿದ ಕುಮಾರವ್ಯಾಸ ಜಯಂತಿ | 4 |
| 'ಗಮಕ' ದಂತಹ ಶಿಷ್ಟಕಲೆಯಿಂದ ಸಮಾಜ ಸುಧಾರಣೆ ಸಾಧ್ಯ : ಶ್ರೀ ಅಶೋಕ್ ಕುಮಾರ್ | 5 |
| ಗದುಗಿನ ಭಾರತ ಪ್ರಬುದ್ಧ ಕೃತಿ: ಡಾ. ಕಬ್ಬಿನಾಲೆ | 7 |
| ಕಾವ್ಯಾರ್ಥ ಚಿಂತನ | 8 |
| ವ್ಯಾಖ್ಯಾನದ ಪೂರ್ವಸಿದ್ಧತೆಗಳು | 9 |
| ಜಿಲ್ಲಾ ವರದಿಗಳು | 12 |
| ಪರಿಷತ್ತಿನಲ್ಲಿ ವಿಶ್ವ ಮಹಿಳಾ ದಿನಾಚರಣೆ | 18 |
| ವ್ಯಕ್ತಿ ಪರಿಚಯ | 19 |
| ಗಮಕ ಪ್ರಶ್ನೋತ್ತರ | 20 |

# ಅಧ್ಯಕ್ಷರ ಲೇಖನಿಯಿಂದ...



ಗಮಕ ಬಂಧುಗಳಿಗೆ 'ವಿಳಂಬಿನಾಮ' ಸಂವತ್ಸರದ ಶುಭಾಶಯಗಳು. ಈ ವರ್ಷದ ಹೊಸ ರೂಪದಲ್ಲಿ ಮೂಡಿಬಂದ 'ದುಂದುಭಿ' ತಮಗೆಲ್ಲರಿಗೂ ಹರುಷವನ್ನು ಉಂಟು ಮಾಡಿದೆ ಎಂದು ಭಾವಿಸುತ್ತಿದ್ದೇವೆ.

ನಮ್ಮ ಪರಿಷತ್ತು ಈಗಾಗಲೇ ಸಾಕಷ್ಟು ಗುರಿಗಳನ್ನು ಹೊಂದಿದ್ದು ಮುಖ್ಯವಾಗಿ ಈ ಕೆಳಗಿನ ಕೆಲಸಗಳನ್ನು ಮಾಡಲು ನಿರ್ಧರಿಸಿರುವೆವು.

- ತ್ರೈ ಮಾಸಿಕ ಪತ್ರಿಕೆ ದುಂದುಭಿಯನ್ನು ಸದಸ್ಯರಿಗೆ ತಲುಪಿಸುವುದು.
- ಹಿರಿಯರ ಹೆಸರಿನಲ್ಲಿ ದತ್ತಿ ಇಟ್ಟಿರುವವರ ಅಪೇಕ್ಷೆಯಂತೆ ಆಯೋಜಿಸುವುದು.
- 'ಗಮಕ ರೂಪಕಗಳನ್ನು' ನಡೆಸಲು ಬೇಕಾದ ಕಾರ್ಯಾಗಾರವನ್ನು ಮಾಡುವುದು.
- ಗಮಕಿಗಳಿಂದ ಹೆಚ್ಚು ಹೆಚ್ಚು ಗಮಕ ತರಗತಿಗಳನ್ನು ನಡೆಸಿ ಪರೀಕ್ಷೆಗೆ ಕಟ್ಟುವಂತೆ ಪ್ರೇರೇಪಿಸುವುದು.
- ಯುವ ಗಮಕಿಗಳಿಗೆ ಅವಕಾಶ ಮಾಡಿಕೊಡುವುದು.
- ತರಗತಿ ನಡೆಸುವ 'ಶಿಕ್ಷಕರಿಗೆ'ಆರಂಭದಲ್ಲೇ ಅವರಿಗೆ ಬೇಕಾದ ಸೂಕ್ತ ಮಾರ್ಗದರ್ಶನ ನೀಡುವುದು.
- ಶಾಲಾ-ಕಾಲೇಜುಗಳಿಗೆ ಹೋಗಿ ಅವರಿಗಿಟ್ಟಿರುವ ಪಠ್ಯಭಾಗಗಳನ್ನು ಕಲಿಸುವುದು. ನಂತರ ಸ್ಪರ್ಧೆ ನಡೆಸಿ ಪ್ರೋತ್ಸಾಹಿಸುವುದು.
- 'ಇನ್‌ಫೋಸಿಸ್ ಫೌಂಡೇಶನ್'ಅವರ ಸಹಕಾರದಲ್ಲಿ'ಗೋಖಲೆ ಸಾರ್ವಜನಿಕ ಸಂಸ್ಥೆ' ಯಲ್ಲಿ 'ತೊರವೆ ನರಹರಿ' ಕವಿ ವಿರಚಿತ 'ತೊರವೆ ರಾಮಾಯಣ'ದ ಸಮಗ್ರ ವಾಚನ ಮತ್ತು ವ್ಯಾಖ್ಯಾನವನ್ನು ನಡೆಸುವುದು.
  (ಕನ್ನಡ ನಾಡಿನಾದ್ಯಂತ ಇರುವ ವಾಚನಕಾರರನ್ನು ಮತ್ತು ವ್ಯಾಖ್ಯಾನಕಾರರನ್ನು ರಾಜಧಾನಿಯಲ್ಲಿ ಪರಿಚಯಿಸಲು ಈ ಯೋಜನೆ ಹಮ್ಮಿಕೊಂಡಿರುವೆವು.)

**ಪರಿಷತ್ತಿನಿಂದ ಇಲ್ಲಿಯವರೆಗೆ ನಡೆಸಿರುವ 'ದತ್ತಿ' ಕಾರ್ಯಕ್ರಮಗಳು:**

1. 22-09-2017ಸೋಮಶೇಖರ ಶರ್ಮರವರು ತಮ್ಮ ಪಿತೃಗಳ ಹೆಸರಿನಲ್ಲಿ ಇಟ್ಟಿರುವ ದತ್ತಿ
2. 01-10-2017 ರತ್ನಚಂದ್ರಶೇಖರ್ ಶರ್ಮರವರು ತಮ್ಮ ತಾತಂದಿರ ಹೆಸರಿನಲ್ಲಿ ಇಟ್ಟಿರುವ ದತ್ತಿ
3. 09-01-2018 ಬಿ.ಎಸ್.ಎಸ್. ಕುಟುಂಬದವರು ಇಟ್ಟಿರುವ ದತ್ತಿ
4. 17-01-2018 ವೆಂಕಟರಾಮಯ್ಯನವರು ಅವರ ಕುಟುಂಬದವರೆಲ್ಲಾ ಸೇರಿ ಇಟ್ಟಿರುವ ದತ್ತಿ
5. 03-02-2018 ಜಯಲಕ್ಷ್ಮಿ ಸೀತಾರಾಮಯ್ಯ ಅವರು ಅವರ ತಂದೆ ಹೆಸರಿನಲ್ಲಿ ಇಟ್ಟಿರುವ ದತ್ತಿ
6. 23-02-2018 ಹೇಮಾವತಿಯವರು ಶಿಷ್ಯರ ಜೊತೆಗೂಡಿ ಇಟ್ಟಿರುವ ದತ್ತಿ
7. 10-03-2018 ಶ್ರೀಮತಿ ಜಯರಾಂರವರು ಅವರ ಕುಟುಂಬದವರೆಲ್ಲಾ ಸೇರಿ ಇಟ್ಟಿರುವ ದತ್ತಿ
8. 13-04-2018 ಶ್ರೀಮತಿ ಸಿ.ವಿ.ಯವರು ಅವರ ಕುಟುಂಬದವರೆಲ್ಲಾ ಸೇರಿ ಇಟ್ಟಿರುವ ದತ್ತಿ
9. 14-04-2018 ಶ್ರೀ ನಾರಾಯಣಸ್ವಾಮಿಯವರ ದತ್ತು ಮಗಳು ವೀಣಾ ನಾಗಾರಾಜ್ ಅವರ ದತ್ತಿ
10. ವಿಜಯಪುರದ ದತ್ತಿ ಹಣದಲ್ಲಿ (1 ಲಕ್ಷದ 15 ಸಾವಿರದಲ್ಲಿ) ಕಾರ್ಯಕ್ರಮಗಳು ನಡೆದಿವೆ - ನಡೆಯುತ್ತಿವೆ.

**ಮುಂದಿನ ಪ್ರಮುಖ ಕಾರ್ಯಕ್ರಮಗಳು:**

- 'ಗಮಕ ರೂಪಕ'ಕಾರ್ಯಾಗಾರ 03-05-2018 ರಿಂದ 13-05-2018ರವರೆಗೆ ಪರಿಷತ್ತಿನ ಆವರಣದಲ್ಲೇ ನಡೆಯುವುದು. ಆಸಕ್ತಿಯುಳ್ಳವರು ಬನ್ನಿರಿ.
- ಸೆಪ್ಟೆಂಬರ್ 14 ರಿಂದ "ತೊರವೆ ರಾಮಾಯಣ" ಕಾರ್ಯಕ್ರಮ ಆರಂಭವಾಗಲಿದೆ. 50 ಕಂತುಗಳಲ್ಲಿ ನಡೆಯುವ ಈ ಕಾರ್ಯಕ್ರಮ ಜುಲೈ19ನೇ ಇಸವಿಗೆ ಮುಗಿಯುವುದು. ಪ್ರತಿ ತಿಂಗಳು 5 ದಿವಸದಂತೆ 10 ತಿಂಗಳು ನಡೆಯುತ್ತವೆ.

ಈಗ ಶ್ರೀ ಸಿ.ವಿ. ನಾರಾಯಣರವರ ಸಹಾಯದಿಂದ ಪರಿಷತ್ತಿಗೆ ಸೂಕ್ತವಾದ ಸ್ಥಳ ದೊರಕಿದೆ. ಅವರಿಗೆ ಗಮಕಿಗಳೆಲ್ಲರ ಹೃತ್ಪೂರ್ವಕವಾದ ಕೃತಜ್ಞತೆಗಳು. ಇನ್ನೂ ಹೆಚ್ಚು ಗಮಕ ಪ್ರಚಾರವಾಗಬೇಕಾಗಿದೆ. ಎಲ್ಲರೂ ತಮ್ಮ ಅಮೂಲ್ಯ ಸಹಕಾರವನ್ನು ನೀಡಿರಿ. ಈ ಬಾರಿ ಸರಕಾರದ ಅನುದಾನವು ಸಿಕ್ಕಿಲ್ಲ. 'ಜನರಿಂದ -ಜನರಿಗೆ 'ಎಂಬ ಧ್ಯೇಯದೊಂದಿಗೆ ಎಲ್ಲರ ಕೃಪಾ ಪೋಷಣೆಯಲ್ಲಿ ಮುಂದುವರಿಯುವುದು; ಮುಂದುವರಿಸುವೆವು.

"ಆಡದಲೆ ಮಾಡುವವನು ರೂಢಿಯೊಳಗುತ್ತಮನು" ಈ ವಾಕ್ಯವೇ ಮಾರ್ಗಸೂಚಿ ನಮ್ಮೆಲ್ಲರಿಗೆ !!

'ಗಮಕ ರಥವನ್ನು' ಕರ್ನಾಟಕದಾದ್ಯಂತ ಹರಿಸೋಣ!!!

ಇಂತಿ ನಮಸ್ಕಾರಗಳು

**ಕರ್ನಾಟಕ ಕಲಾಶ್ರೀ ಗಂಗಮ್ಮ ಕೇಶವ ಮೂರ್ತಿ**

ಅಧ್ಯಕ್ಷರು

ಕರ್ನಾಟಕ ಗಮಕ ಕಲಾ ಪರಿಷತ್ತು, ಬೆಂಗಳೂರು

# ಸಂಪಾದಕೀಯ...



ಸಹೃದಯ ಗಮಕ ಬಂಧುಗಳೇ,

ತಮಗೆಲ್ಲಾ ವಿಳಂಬಿನಾಮ ಸಂವತ್ಸರದ ಶುಭಾಶಯಗಳು. ಹೊಸರೂಪದಲ್ಲಿ ಮೂಡಿಬಂದ 'ಗಮಕ ದುಂದುಂಭಿ'ಯ ಬಗ್ಗೆ ನೀವು ತೋರಿಸಿದ ಮೆಚ್ಚುಗೆ, ಪ್ರೀತಿ, ಕಾಳಜಿ ಹಾಗೂ ಮುಕ್ತ ಅಭಿಪ್ರಾಯಗಳಿಗೆ ನಾವು ಆಭಾರಿ.

ಪರಿಷತ್ತಿನ ವತಿಯಿಂದ ಬೆಂಗಳೂರಿನಲ್ಲಿ ಅದ್ದೂರಿಯಾಗಿ ನೆರವೇರಿದ ಕುಮಾರವ್ಯಾಸ ಜಯಂತಿಯ ಆಚರಣೆಯಂದೇ ಕುವಾರವ್ಯಾಸನ ಭಾವಚಿತ್ರದೊಂದಿಗೆ, ವರ್ಣರಂಜಿತ ಮುಖಪುಟದಲ್ಲಿ ಹೊರಬಂದ ಪರಿಷತ್ತಿನ ಅಧಿಕೃತ ತ್ರೈಮಾಸಿಕ ಪತ್ರಿಕೆಯನ್ನು ಕಂಡು ಪ್ರತಿಕ್ರಿಯಿಸಿದ ಎಲ್ಲಾ ಗಮಕಾಭಿಮಾನಿಗಳ ಹೃದಯಾಂತರಾಳದ ಮಾತುಗಳು ಮತ್ತು ಸಲಹೆ -ಸೂಚನೆಗಳು ನಮ್ಮ ಜವಾಬ್ದಾರಿಗಳನ್ನು ಮತ್ತಷ್ಟು ಹೆಚ್ಚಿಸಿದೆ. ಈ ನಿಟ್ಟಿನಲ್ಲಿ ನಾವೂ ಸಮರ್ಥ ಹೆಜ್ಜೆಗಳನ್ನು ಮುಂದಿನ ದಿನಗಳಲ್ಲಿ ಇಡಲು ಸಿದ್ಧರಾಗಿದ್ದೇವೆ. ಎಲ್ಲಾ ಜಿಲ್ಲೆಯ ವರದಿಗಳು, ಗಮಕ ಸಂಬಂಧಿ ಲೇಖನಗಳನ್ನು ಹೆಚ್ಚಾಗಿ ಪ್ರಕಟಿಸುವ ಇಚ್ಛೆ ಪತ್ರಿಕೆಯದ್ದಾಗಿದ್ದರೂ ನಿರ್ದಿಷ್ಟ ಪುಟಗಳ ಮಿತಿಯೊಂದಿಗೆ ಪ್ರಕಟಿಸಬೇಕಾಗಿರುವುದರಿಂದ ವರದಿಗಳ ಸಂಕ್ಷಿಪ್ತತೆ ಮತ್ತು ಸ್ಪಷ್ಟತೆಯ ಕಡೆ ಹೆಚ್ಚು ಗಮನ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಜಿಲ್ಲಾ ಪ್ರತಿನಿಧಿಗಳೇ ಮೂರು ತಿಂಗಳ ತಮ್ಮ ಜಿಲ್ಲಾ ಕಾರ್ಯಕ್ರಮಗಳ ಸಂಪೂರ್ಣ ವರದಿಯನ್ನು ಸಂಗ್ರಹ ರೂಪದಲ್ಲಿ ನಮಗೆ ಕಳುಹಿಸಿಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಇದು ಜಿಲ್ಲಾ ಪ್ರತಿನಿಧಿಗಳು ನಿರ್ವಹಿಸಬೇಕಾದ ಪ್ರಮುಖ ಕೆಲಸವೂ ಆಗಿದೆ.

ಪರಿಷತ್ತಿನ ಬೆಳವಣಿಗೆಗಾಗಿ ಮತ್ತು ಪತ್ರಿಕೆಯ ನಿರಂತರ ಪ್ರಸಾರಕ್ಕಾಗಿ ಸದಸ್ಯತ್ವ ನೋಂದಣಿ ಅಭಿಯಾನ ಅವಶ್ಯಕವಾಗಿದ್ದು ಗಮಕಾಭಿಮಾನಿಗಳನ್ನು ಪರಿಷತ್ತಿನ ಸದಸ್ಯರನ್ನಾಗಿಸುವುದು ನಮ್ಮೆಲ್ಲರ ಕರ್ತವ್ಯ. 250/- ರೂ. ಆಜೀವ ಸದಸ್ಯತ್ವದೊಂದಿಗೆ 750/- ರೂ. ಪತ್ರಿಕೆಯ ಚಂದಾ ಹಣವಾಗಿ ಸ್ವೀಕರಿಸಲು ಪರಿಷತ್ತು ನಿರ್ಧರಿಸಿದ್ದು, ಈಗಾಗಲೇ ಬಹಳಷ್ಟು ಜನ 1,000/- ರೂ. ನೀಡಿರುವುದಕ್ಕೆ ಪರಿಷತ್ತು ಕೃತಜ್ಞತೆಗಳನ್ನು ಅರ್ಪಿಸುತ್ತದೆ. ಈ ಬಾರಿಯೂ ಪತ್ರಿಕೆಯನ್ನು ಉಚಿತವಾಗಿ ಎಲ್ಲರಿಗೂ ನೀಡುತ್ತಿದ್ದು, ಮುಂದಿನ ದಿನಗಳಲ್ಲಿ 1,000/- ರೂ. ನೀಡಿರುವ ಸದಸ್ಯರಿಗೆ ಅಂಚೆ ಮೂಲಕವೇ ಪತ್ರಿಕೆ ತಲುಪಿಸಲು ವ್ಯವಸ್ಥೆ ಮಾಡಲಾಗುತ್ತಿದೆ.

ಗಮಕ ಕಲೆಯನ್ನು ನಾಡಿನಾದ್ಯಂತ ಪಸರಿಸುತ್ತಿರುವ ನಾಡಿನ ಎಲ್ಲಾ ಹಿರಿಯ-ಕಿರಿಯ ಗಮಕಿಗಳನ್ನು -ವ್ಯಾಖ್ಯಾನಕಾರರನ್ನು ಹಾಗೂ ವಿಶೇಷ ಪುರಸ್ಕಾರಕ್ಕೆ ಪಾತ್ರರಾದ ಹಲವಾರು ಸಾಧಕರನ್ನು ಪತ್ರಿಕೆಯು ಆತ್ಮೀಯವಾಗಿ ಅಭಿನಂದಿಸುತ್ತದೆ.

ಪತ್ರಿಕೆಯ ಸಂಪೂರ್ಣ ಜೀವಾಳ ಗಮಕಾಭಿಮಾನಿಗಳೇ ಆಗಿದ್ದು ಪರಿಷತ್ತಿನ ಮತ್ತು ಪತ್ರಿಕೆಯ ಬೆಳವಣಿಗೆಯೊಂದಿಗೆ 'ಗಮಕ ಕಲೆಯ' ಪ್ರಸಾರಕ್ಕೆ ತಮ್ಮೆಲ್ಲರ ಸಹಕಾರವನ್ನು ವಿನಮ್ರವಾಗಿ ಕೋರುತ್ತೇನೆ.

ಗಮಕ ಕಲಾರಾಧಕ

**ವಿದ್ವಾನ್ ಕೃ.ಪಾ. ಮಂಜುನಾಥ್**

ಉಪನ್ಯಾಸಕರು ಮತ್ತು ಗಮಕ ವ್ಯಾಖ್ಯಾನಕಾರರು


**ಪತ್ರಿಕೆಗೆ ಜಾಹೀರಾತು ನೀಡಿ - ಗಮಕ ಕಲೆಯನ್ನು ಪ್ರೋತ್ಸಾಹಿಸಿ**

| | | |
|---|---|---|
| ವರ್ಣರಂಜಿತ ಹೊರಪುಟ | - | 4,000/- |
| ವರ್ಣರಂಜಿತ ಒಳಪುಟ | - | 2,000/- |
| ಒಳಭಾಗದ ಪೂರ್ಣಪುಟ | - | 1,000/- |
| ಒಳಭಾಗದ ಅರ್ಧಪುಟ | - | 500/- |


## ವಿಶೇಷ ಸೂಚನೆ

**ಶ್ರೀ ರಾಘವೇಂದ್ರ ಬ್ಯಾಂಕಿನಲ್ಲಿ ಇಲ್ಲಿಯವರೆಗೆ ತೆಗೆದುಕೊಂಡಿದ್ದ 3,40,000/- ರೂಪಾಯಿಗಳ ODಯನ್ನು (ಓವರ್ ಡ್ರಾಫ್ಟ್) ಪರಿಷತ್ತಿನ ಅಧ್ಯಕ್ಷರಾದ ಶ್ರೀಮತಿ ಗಂಗಮ್ಮ ಕೇಶವಮೂರ್ತಿ ಮತ್ತು ಅವರ ಸುಪುತ್ರರಾದ ಶ್ರೀ ಆನಂದ ಕೇಶವ ಮೂರ್ತಿ ಇಬ್ಬರೂ ಸೇರಿ ಹಣ ಸಂದಾಯ ಮಾಡುವ ಮೂಲಕ ಬ್ಯಾಂಕಿನ ಬಾಕಿ ಹಣದಿಂದ ಋಣಮುಕ್ತಗೊಳಿಸಿದ್ದಾರೆ.**

# ಅರ್ಥಪೂರ್ಣವಾಗಿ ನೆರವೇರಿದ ಕುಮಾರವ್ಯಾಸ ಜಯಂತಿ



ಕರ್ನಾಟಕ ಗಮಕ ಕಲಾ ಪರಿಷತ್ತಿನ ಅಧ್ಯಕ್ಷರಾದ ಶ್ರೀಮತಿ ಗಂಗಮ್ಮ ಕೇಶವಮೂರ್ತಿ ಅವರ ನೇತೃತ್ವದಲ್ಲಿ 10-2-2018 ಮತ್ತು 11-2-2018 ಶನಿವಾರ - ಭಾನುವಾರಗಳಂದು ಕುಮಾರವ್ಯಾಸ ಸಂಸ್ಮರಣೆಗೆ ಕುಮಾರವ್ಯಾಸ ಜಯಂತಿಯನ್ನು ಗಿರಿನಗರದ ಅಕ್ಷರ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು. 10-2-2018ನೇ ಶನಿವಾರ ಕಾರ್ಯಕ್ರಮದ ಉದ್ಘಾಟನೆಯನ್ನು ಕುಮಾರವ್ಯಾಸನ ವಂಶದವರೇ ಆದ ಗದುಗಿನ ಕೋಳಿವಾಡದಿಂದ ಆಗಮಿಸಿದ್ದ ಶ್ರೀ ಅವಧೂತ ವಿ. ಪಾಟೀಲರು ಹಾಗೂ ಅವರ ಕುಲಪುರೋಹಿತರಾದ ಶ್ರೀ ಗೋಪಾಲಕೃಷ್ಣ ಇವರುಗಳು ನೆರವೇರಿಸಿ, ಗೌರವವನ್ನು ಸಮರ್ಪಿಸಿ ತಮ್ಮ ಹಿತನುಡಿಗಳಿಂದ ಹಿರಿಯನಾದ ಕುಮಾರವ್ಯಾಸನನ್ನು ಸ್ಮರಿಸಿದ್ದು ಒಂದು ವಿಶೇಷ. ಇದು ಗಮಕಾಭಿಮಾನಿಗಳಿಗೆಲ್ಲ ಒಂದು ವಿಶಿಷ್ಟ ಸಂದರ್ಭವಾಗಿತ್ತು. ಇದೇ ಸಂದರ್ಭದಲ್ಲಿ ಪರಿಷತ್ತಿನ ತ್ರೈಮಾಸಿಕ ಪತ್ರಿಕೆ ಗಮಕ ದುಂದುಭಿಯು ಹೊಸ ರೂಪದಲ್ಲಿ ಲೋಕಾರ್ಪಣೆಗೊಂಡು ಎಲ್ಲರ ಮೆಚ್ಚುಗೆಗೂ ಪಾತ್ರವಾಯಿತು. ಇದರ ಸಂಪಾದಕರಾದ ಶ್ರೀ ಕೃ.ಪಾ. ಮಂಜುನಾಥ್ ಅವರನ್ನು ಇದೇ ಸಂದರ್ಭದಲ್ಲಿ ಗೌರವಿಸಿ, ಅಭಿನಂದಿಸಲಾಯಿತು.

ಈ ಎರಡು ದಿನ ಅನೇಕ ಪ್ರಖ್ಯಾತ ಗಮಕಿಗಳ ವ್ಯಾಖ್ಯಾನಕಾರರ ವಿವಿಧ ವಾಚನ, ವ್ಯಾಖ್ಯಾನವನ್ನು ಗದುಗಿನ ಭಾರತದ ಆದಿಪರ್ವದಿಂದಲೇ ಪ್ರಾರಂಭಿಸಲಾಯಿತು. ಇದರಲ್ಲಿ ಸರಣೀವಾಚನ ಕಾರ್ಯಕ್ರಮ, ಸರಣೀ ವ್ಯಾಖ್ಯಾನ ಕಾರ್ಯಕ್ರಮ,ಉಪನ್ಯಾಸಗಳು ನಡೆದವು. ಕ.ಗ. ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷರಾದ ಶ್ರೀಯುತ ಎಂ.ಆರ್. ಸತ್ಯನಾರಾಯಣ, ಶ್ರೀಮತಿ ಜಯರಾಂ, ಶ್ರೀ ಹೆಚ್.ಎಸ್. ಗೋಪಾಲ್ ಮುಂತಾದ ಹಿರಿಯರು ಭಾಗವಹಿಸಿ ಯಶಸ್ವಿಗೊಳಿಸಿದರು.

ಕಥಾಕೀರ್ತನ, ಕಾವ್ಯ, ನೃತ್ಯ ಮತ್ತು ಗಮಕ ರೂಪಕಗಳು ವಿಶೇಷ ಆಕರ್ಷಣೆಯಾಗಿದ್ದವು. ವಿದುಷಿ ಶ್ರೀಮತಿ ಅವರ ವಾಗ್ದೇವಿ ಗಮಕ ಕಲಾ ಪ್ರತಿಷ್ಠಾನದ ಯುವ ಗಮಕಿಗಳಿಂದ ವಾಚನ, ವ್ಯಾಖ್ಯಾನ ಹೃನ್ಮನ ತಣಿಸಿತು. ಉಪನ್ಯಾಸದಲ್ಲಿ ಕುಮಾರವ್ಯಾಸನ ಸ್ತ್ರೀ ಪಾತ್ರಗಳಂತೂ ಶ್ರೀಮತಿ ಕಮಲಮ್ಮ ವಿಠ್ಠಲ ರಾವ್ ಅವರ ಧ್ವನಿಯಲ್ಲಿ ವಿಜೃಂಭಿಸಿತು. ಕುಮಾರವ್ಯಾಸನ ಶೈಲಿಗತ ಸ್ವಾರಸ್ಯವನ್ನು ಡಾ. ಎನ್.ಕೆ. ರಾಮಶೇಷನ್ ಅವರು ಸ್ವಾರಸ್ಯವಾಗಿ ಸಭೆಯ ಮುಂದಿಟ್ಟರು. ಭಾನುವಾರದ ಸರಣಿ ವಾಚನ, ವ್ಯಾಖ್ಯಾನ ಕಾರ್ಯಕ್ರಮದಲ್ಲಿ ಹೊಸಚಿಗುರು, ಹಳೆಬೇರುಗಳು ಸಂಗಮವಾಗಿ ಹೆಮ್ಮರದ ದರ್ಶನವಾಯಿತು. ಸಮರ್ಥವಾದ ಕಾರ್ಯಕ್ರಮದ ನಿರ್ವಹಣೆ, ಅದರ ಜತೆಗೆ ರುಚಿಯಾದ ಭೋಜನ, ಪಾನೀಯಗಳು ಕಾರ್ಯಕ್ರಮಕ್ಕೆ ಮತ್ತಷ್ಟು ಆಸ್ವಾದ ನೀಡಿತು. ಅಲಂಕಾರಗೊಂಡ ವೇದಿಕೆಯಿಂದ ಕುಮಾರವ್ಯಾಸ ಜಯಂತಿಯು ಸುಸಂಪನ್ನವಾಯಿತು.

**ಶ್ರೀಮತಿ ವಿಜಯಾ ರಂಗನಾಥ್**
ಬೆಂಗಳೂರು

# ‘ಗಮಕ’ದಂತಹ ಶಿಷ್ಟಕಲೆಯಿಂದ ಸಮಾಜ ಸುಧಾರಣೆ ಸಾಧ್ಯ : ಶ್ರೀ ಅಶೋಕ್ ಕುಮಾರ್

ನೈತಿಕ ಮೌಲ್ಯಗಳನ್ನು ಬೆಳೆಸುವ ಮತ್ತು ಸಮಾಜದಲ್ಲಿ ಶಾಂತಿಯನ್ನು ಸ್ಥಾಪಿಸಲು ಅನುಕೂಲವಾದ ಶ್ರೇಷ್ಠ ಕಲೆ ಗಮಕ. ಇದನ್ನು ಬೆಳೆಸುವಲ್ಲಿ, ಉಳಿಸುವಲ್ಲಿ ಜಿಲ್ಲಾ ಗಮಕ ಕಲಾ ಪರಿಷತ್ತು ಸತತ ಪ್ರಯತ್ನಿಸುತ್ತಿರುವುದು ಸುತ್ತ್ಯಾರ್ಹ. ಅದರಲ್ಲೂ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಗಮಕದ ಮೂಲಕ ಸುಸಂಸ್ಕೃತಿಯನ್ನು ಸತ್ಸಂಪ್ರದಾಯವನ್ನು ಆಚರಣೆಗೆ ತರುವಂತೆ ಪ್ರಯತ್ನಿಸುತ್ತಿರುವುದು ಅತ್ಯುತ್ತಮ ಕಾರ್ಯ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು, ಗಮಕದಂತಹ ಶಿಷ್ಟ ಕಲೆಗೆ ಪ್ರೋತ್ಸಾಹ ಮತ್ತು ಸಹಕಾರ ನೀಡುತ್ತಿರುವುದಕ್ಕೆ ನಾವು ಕೃತಜ್ಞತೆ ಸಲ್ಲಿಸಬೇಕು, ಎಂದು ತರಿಕೆರೆ ಪುರಸಭೆಯ ಉಪಾಧ್ಯಕ್ಷರಾದ ಶೀ ಟಿ.ಜಿ. ಅಶೋಕ್ ಕುಮಾರ್ ಶ್ಲಾಘಿಸಿದರು. ಅವರು ಶ್ರೀ ಸುಬ್ರಹ್ಮಣ್ಯೇಶ್ವರ ದೇವಾಲಯದಲ್ಲಿ ಶ್ರೀವತ್ಸ ಭಜನಾ ಮಂಡಳಿಯವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಚಿಕ್ಕಮಗಳೂರು ಇವರ ಸಹಯೋಗದಲ್ಲಿ ಏರ್ಪಡಿಸಿರುವ ಗಮಕ ವಾಚನ ವ್ಯಾಖ್ಯಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ನಿವೃತ್ತ ಉಪನ್ಯಾಸಕರೂ, ಜಿಲ್ಲಾ ಗಮಕ ಕಲಾ ಪರಿಷತ್ತಿನ ಅಧ್ಯಕ್ಷರೂ ಆದ ಶೀ ರಾಮಸುಬ್ರಾಯ ಶೇಟ್ ಇವರು ಪ್ರಾಸ್ತಾವಿಕವಾಗಿ ಮಾತನಾಡುತ್ತ ಗಮಕಿಗಳಾದ ಶ್ರೀ ರಾಧಾಕೃಷ್ಣ, ಶೀಮತಿ ಶಶಿಕಲಾ ಮತ್ತು ಶಾರದಾ ಇವರ ಸಹಕಾರದಿಂದ ಪ್ರೌಢಶಾಲೆಗಳಲ್ಲಿ 300ಕ್ಕೂ ಹೆಚ್ಚು ಗಮಕ ಕಾರ್ಯಕ್ರಮಗಳನ್ನು ನೀಡಿದ್ದೇವೆ. ಗಮಕ ತರಬೇತಿ ಮನೆಯಂಗಳದ ಗಮಕ ಹಮ್ಮಿಕೊಂಡಿದ್ದೇವೆ. ಸಾ.ಶಿ. ಇಲಾಖೆ ಪೂರ್ಣ ಸಹಕಾರ ನೀಡುತ್ತಿದೆ. ವಿದ್ಯಾರ್ಥಿಗಳು ಕೇವಲ ಪಠ್ಯದಲ್ಲಿಯೇ ಮುಳುಗಿರಬಾರದು. ಅವರಿಗೆ ಪುರಾಣದ ಉತ್ತಮ ಅಂಶಗಳನ್ನು ಮನವರಿಕೆ ಮಾಡಿಕೊಡಬೇಕಾಗುತ್ತದೆ. ಆ ದಿಸೆಯಲ್ಲಿ ಗಮಕ ಅತ್ಯಂತ ಪರಿಣಾಮಕಾರಿ ಕಾರ್ಯವೆಸಗುತ್ತಿದೆ ಎಂದು ರಾಘವಾಂಕ ಮಹಾಕವಿಯ ಶ್ರೇಷ್ಠತೆಯನ್ನು ವಿವರಿಸಿದರು. ಮತ್ತು ಇಕ್ಷ್ವಾಕುವಂಶದರಸು ಹರಿಶ್ಚಂದ್ರ ಹೇಗೆ ಕಷ್ಟಗಳನ್ನು ಎದುರಿಸಿದ ಮತ್ತು ಸತ್ಯಕ್ಕಾಗಿ ಹೆಂಡತಿ ಮಕ್ಕಳನ್ನು ಬಿಟ್ಟು ತಾನು ಮಸಣದ ಕಾವಲುಗಾರನಾಗಿ ಕರ್ತವ್ಯವನ್ನು ಪರಿಪಾಲಿಸಿ ಸತ್ಯಹರಿಶ್ಚಂದ್ರನೆನಿಸಿಕೊಂಡ ಎಂದು ಅತ್ಯಂತ ಅರ್ಥಗರ್ಭಿತವಾಗಿ ಶ್ರೀಮತಿ ಸುನಿತಾ ಕಿರಣ್‌ರವರ ಹರಿಶ್ಚಂದ್ರ ಕಾವ್ಯ ವಾಚನಕ್ಕೆ ವ್ಯಾಖ್ಯಾನ ನೀಡಿದರು. ಮುಖ್ಯ ಅತಿಥಿಗಳಾದ ಶ್ರೀ ಬ್ರಾಹ್ಮಣ ಸೇವಾ ಸಮಿತಿಯು ಅಧ್ಯಕ್ಷರಾದ ಶ್ರೀ ಎ.ವಿ. ನಾಗಭೂಷಣ ಇವರು ಯುವ ಪ್ರತಿಭೆ, ಗಮಕ ಗಾಯಕಿ ಸುನಿತಾ ಕಿರಣರನ್ನು ಶ್ಲಾಘಿಸಿ ಶ್ರೀವತ್ಸ ಭಜನಾ ಮಂಡಳಿಯಿಂದ ಇನ್ನೂ ಉತ್ತಮ ಕಾರ್ಯಗಳು ಜರುಗುತ್ತಿರಲೆಂದು ಹಾರೈಸಿದರು. ಭಜನಾಮಂಡಳಿ ಅಧ್ಯಕ್ಷರಾದ ಶ್ರೀಮತಿ ಲತಾ ಗೋಪಾಲಕೃಷ್ಣ ಅಧ್ಯಕ್ಷತೆ ವಹಿಸಿದ್ದ ಸಭೆಯಲ್ಲಿ ಕುಮಾರಿ ರಕ್ಷಾ ಮತ್ತು ಲಕ್ಷ್ಮಿ ಪ್ರಾರ್ಥನೆ ಮತ್ತು ನಾಡಗೀತೆ ನಡೆಸಿಕೊಟ್ಟರು. ಶ್ರೀ ಗೋಪಾಲಕೃಷ್ಣ ಸ್ವಾಗತಿಸಿದರು, ಶ್ರೀಧರವರು ವಂದಿಸಿದರು.



# ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಗಮಕ ವಾಚನ ಮತ್ತು ವ್ಯಾಖ್ಯಾನ ತರಬೇತಿ ಶಿಬಿರ

ಹಾಸನದ ಸಂಸ್ಕೃತ ಭವನದಲ್ಲಿ ಜರುಗಿದ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಏರ್ಪಡಿಸಿದ್ದ ಮೂರು ದಿನಗಳ **"ಗಮಕ ವಾಚನ ಮತ್ತು ವ್ಯಾಖ್ಯಾನ ತರಬೇತಿ ಶಿಬಿರ–2018"** ನ್ನು ಉದ್ಘಾಟಿಸುತ್ತ ನಿವೃತ್ತ ಪ್ರಾಂಶುಪಾಲ, ಕವಿ, ಪ್ರೊ.ವಿ. ನರಹರಿಯವರು ಕನ್ನಡ ಭಾಷೆಯ ವಿಶಿಷ್ಟ ಕಲೆಯಾದ ಗಮಕವು ಇನ್ನಷ್ಟು ಆಳವಾಗಿ ನೆಲೆಯೂರಲು ಇಂತಹ ತರಬೇತಿ ಶಿಬಿರವು ಅಗತ್ಯವೆಂದರು. ಭಾಷೆ, ಭಾವ ಮತ್ತು ರಾಗಗಳ ಒಗ್ಗೂಡಿಕೆಯೇ ಗಮಕದ ವೈಶಿಷ್ಟ್ಯವಾದುದರಿಂದ ಗಮಕಿಗಳು ಈ ಮೂರರಲ್ಲೂ ಸೂಕ್ತ ಹಿನ್ನೆಲೆಯನ್ನು ಬೆಳೆಸಿಕೊಳ್ಳಬೇಕೆಂದರು. ಕನ್ನಡ ಕಾವ್ಯ ಪ್ರಪಂಚವು ಇನ್ನೂ ಉಸಿರಾಡುತ್ತಿದ್ದರೆ ಅದಕ್ಕೆ ಗಮಕಿಗಳೇ ಕಾರಣವೆಂದೂ, ಈ ಮೂರು ದಿನಗಳ ತರಬೇತಿಯು ಒಂದು ರೀತಿಯಲ್ಲಿ ಗಮಕಿಗಳಿಗೆ ಪುನಶ್ಚೇತನವಿದ್ದಂತೆ, ಆದ್ದರಿಂದ ಅದನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದು ಕಿವಿಮಾತು ಹೇಳಿದರು.

ಸಮಾರಂಭದ ಮುಖ್ಯ ಅತಿಥಿಯಾಗಿ ಆಗಮಿಸಿದ ಲೆಕ್ಕ ಪರಿಶೋಧಕರೂ ಹಾಸನ ಸಂಸ್ಕೃತ ಸಂಘದ ಅಧ್ಯಕ್ಷರೂ ಆದ ಎಸ್.ಕೆ. ಸತ್ಯನಾರಾಯಣರವರು ನಮ್ಮ ಸಂಸ್ಕೃತಿ ಜೀವಂತ. ಮುಖ್ಯ ಭಾಗವಾದ ಸಂಗೀತ, ಗಮಕಗಳು ದುರ್ಬಲವಾದರೆ ಮುಂದಿನ ಜನಾಂಗಕ್ಕೆ ಆಗುವ ನಷ್ಟ ಅಪಾರವಾದ್ದರಿಂದ ಇಂತಹ ಶಿಬಿರವು ಗಮಕಿಗಳಿಗೆ ಪುನರ್ಬಲವನ್ನು ತರುತ್ತದೆ ಎಂದರು.

ಅಧ್ಯಕ್ಷ ಸ್ಥಾನದಿಂದ ಮಾತನಾಡುತ್ತ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಸದಸ್ಯರಾದ ಖ್ಯಾತ ಗಮಕ ವಿದುಷಿ ಕಲಾಶ್ರೀ ನಿರ್ಮಲಾ ಪ್ರಸನ್ನರವರು ಇಂತಹ ಗಮಕ ತರಬೇತಿಗೆ ಹಾಸನವು ಸ್ವಾಭಾವಿಕವಾಗಿ ಸೂಕ್ತ ಸ್ಥಳವಾಗಿದೆ. ಗಮಕಕಲೆಯು ಬೆಳೆಯಬೇಕಾದರೆ ಗಮಕಿಗಳು ಈ ಕಲೆಯಲ್ಲಿ ಶ್ರದ್ಧೆ ಮತ್ತು ಬದ್ಧತೆಗಳನ್ನು ಬೆಳೆಸಿಕೊಳ್ಳಬೇಕು ಮತ್ತು ಈ ಕೌಶಲಕ್ಕೆ ಸತತ ಸಾಧನೆ ಅವಶ್ಯಕ ಎಂಬುದನ್ನು ವಿಶೇಷವಾಗಿ ಹೇಳಿದರು.

ಆರಂಭದಲ್ಲಿ ಶ್ರೀಮತಿ ಗೀತಾ ಭಟ್ ಮತ್ತು ಕು॥ ವಿಭಾಶ್ರೀಯವರು ಸ್ವಾಗತ ಗೀತೆಯನ್ನು ಹಾಡಿದರು. ಹಾಸನ ಜಿಲ್ಲಾ ಗಮಕ ಪರಿಷತ್ತಿನ ಅಧ್ಯಕ್ಷರಾದ ಕಲಾಶ್ರೀ ಗಣೇಶ್ ಉಡುಪ ಸ್ವಾಗತಿಸಿ, ವಂದಿಸುತ್ತಾ ಕಾರ್ಯಕ್ರಮವನ್ನು ನಿರೂಪಿಸಿದರು.

ಆರಂಭಿಕ ತರಗತಿಯಲ್ಲಿ ಗಂಗಮ್ಮ ಕೇಶವಮೂರ್ತಿಯವರು ಗಮಕವಾಚನವನ್ನು ಶಿಬಿರಾರ್ಥಿಗಳಿಗೆ ಹೇಳಿ ಕೊಡುವ ಮೂಲಕ ಶಿಬಿರಕ್ಕೆ ಚಾಲನೆ ನೀಡಿದರು. ನಂತರ ನಡೆದ ಕಾರ್ಯಕ್ರಮದಲ್ಲಿ ಚನ್ನರಾಯಪಟ್ಟಣದ ವಿದುಷಿ ನಾಗಶ್ರೀ ನಾಗೇಶ್ ರುದ್ರಭಟ್ಟನ ಜಗನ್ನಾಥ ವಿಜಯದಿಂದ ಆಯ್ದ ಕಾಳಿಂಗಮರ್ದನ ಭಾಗವನ್ನು ಸುಶ್ರಾವ್ಯವಾಗಿ ವಾಚನ ಮಾಡಿದರೆ, ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಸಹಪ್ರಾಧ್ಯಾಪಕಿ ಡಾ॥ ಜ್ಯೋತಿಶಂಕರ್ ಅವರು ವಿದ್ವತ್ಪೂರ್ಣವಾದ ವ್ಯಾಖ್ಯಾನ ನೀಡಿ ಶಿಬಿರಾರ್ಥಿಗಳನ್ನು ಹುರಿದುಂಬಿಸಿದರು.

ವಿಭಾಗೀಯ ಮಟ್ಟದ ಈ ತರಬೇತಿ ಶಿಬಿರದಲ್ಲಿ ಮೈಸೂರು, ಚಿಕ್ಕಮಗಳೂರು ಮತ್ತು ಹಾಸನದ ಎಲ್ಲಾ ತಾಲ್ಲೂಕುಗಳಿಂದ ಎಪ್ಪತ್ತು ಮಂದಿ ಶಿಬಿರಾರ್ಥಿಗಳು ತರಬೇತಿಯ ಪ್ರಯೋಜನ ಪಡೆದರು.

" ಗಮಕ ಕಾವ್ಯವನ್ನು ನೋಡುವ ಕಣ್ಣು, ಗಮಕದಿಂದ ಕಾವ್ಯದ ಅರ್ಥ, ಭಾವ, ಸೌಂದರ್ಯವನ್ನು ಅರ್ಥಮಾಡಿಕೊಳ್ಳಲು ಸಾಧ್ಯ" ಎಂದು ಸಾಹಿತಿ ಚಂದ್ರಕಾಂತ ಪಡೆಸೂರ ನುಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಅಕಾಡೆಮಿಯ ಸದಸ್ಯರಾದ ಕಲಾಶ್ರೀ ಗಮಕವಿದುಷಿ ನಿರ್ಮಲಾ ಪ್ರಸನ್ನ ರವರು ಮಾತನಾಡಿ "ನಾಡಿನ ವಿವಿಧ ಕಡೆಯಲ್ಲಿ ಗಮಕ ಪ್ರಸಾರ ಮಾಡುವುದು ಅಕಾಡೆಮಿಯ ಉದ್ದೇಶವಾಗಿದೆ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಜೊತೆಗೆ ಗಮಕಲಾ ಪರಿಷತ್ತಿನವರೂ ಕೈ ಜೋಡಿಸಬೇಕು" ಎಂದು ವಿನಂತಿಸಿದರು. ಸಮಾರಂಭದಲ್ಲಿ ವಾಸವಿ ಆಂಗ್ಲಮಾಧ್ಯಮ ಶಾಲೆಯ ಆಡಳಿತಾಧಿಕಾರಿ ಜಿ.ಎಸ್. ಮಂಜುನಾಥ್ ಮತ್ತು ಗಮಕಕಲಾ ಪರಿಷತ್‌ನ ಅಧ್ಯಕ್ಷೆ ಗಂಗಮ್ಮ ಕೇಶವಮೂರ್ತಿ ಉಪಸ್ಥಿತರಿದ್ದರು.

ಮೂರು ದಿನಗಳು ಗಮಕ ವಾಚನ ಮತ್ತು ವ್ಯಾಖ್ಯಾನ ತರಬೇತಿ ಶಿಬಿರ ನಡೆದು, ಗಮಕಕಲಾ ಪರಿಷತ್ತಿನ ಅಧ್ಯಕ್ಷರಾದ ಗಮಕ ರತ್ನಾಕರ ಗಂಗಮ್ಮ ಕೇಶವಮೂರ್ತಿ, ಕಲಾಶ್ರೀ ಗಣೇಶ್ ಉಡುಪ, ಶ್ರೀ ಜಿ.ಎಸ್. ಮಂಜುನಾಥ್ ಹಾಗೂ ಶ್ರೀಮತಿ ಶಾಂತಾ ಗೋಪಾಲ್‌ರವರು ಸಂಪನ್ಮೂಲ ವ್ಯಕ್ತಿಗಳಾಗಿ ತರಬೇತಿ ನೀಡಿದರು. ಸದರಿ ತರಬೇತಿ ಶಿಬಿರದಲ್ಲಿ ಎಪ್ಪತ್ತು ಶಿಬಿರಾರ್ಥಿಗಳಿದ್ದು, ಶಿಬಿರದ ಸಂಪೂರ್ಣ ಪ್ರಯೋಜನವನ್ನು ಪಡೆದರು. ಎರಡನೇ ದಿನ ಕರ್ನಾಟಕ ಗಮಕಕಲಾ ಪರಿಷತ್ತಿನ ಅಧ್ಯಕ್ಷೆ ಗಂಗಮ್ಮ ಕೇಶವಮೂರ್ತಿರವರು ಜೈಮಿನಿ ಭಾರತದ ಆಯ್ದಭಾಗವನ್ನು ಭಾವಪೂರ್ಣವಾಗಿ ವಾಚನ ಮಾಡಿದರೆ ಸಂಸ್ಕೃತ ಉಪನ್ಯಾಸಕರಾದ ವಿದ್ವಾನ್ ಪರಮೇಶ್ವರ ವಿ. ಭಟ್‌ರವರು ವಿದ್ವತ್ಪೂರ್ಣವಾದ ವ್ಯಾಖ್ಯಾನ ನೀಡಿದರು.

ಸಮಾರೋಪ ಸಮಾರಂಭವು ವಿದುಷಿ ಹೇಮಾ ಗಣೇಶ್ ಅವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಜಿಲ್ಲಾ ಗಮಕ ಪರಿಷತ್ತಿನ ಗೌ॥ ಕಾರ್ಯದರ್ಶಿ ರುಕ್ಮಿಣಿ ನಾಗೇಂದ್ರರವರು ಸ್ವಾಗತಿಸಿ, ಪರಿಷತ್ತಿನ ಜಿಲ್ಲಾ ಅಧ್ಯಕ್ಷರಾದ ಗಣೇಶ್ ಉಡುಪರವರು ಕಾರ್ಯಕ್ರಮವನ್ನು ನಿರೂಪಿಸಿ, ಕೊನೆಯಲ್ಲಿ ವಂದಿಸಿದರು. ಇದೇ ಸಂದರ್ಭದಲ್ಲಿ ಎಲ್ಲಾ ಶಿಬಿರಾರ್ಥಿಗಳಿಗೆ ಅಕಾಡೆಮಿ ವತಿಯಿಂದ ಪ್ರಮಾಣಪತ್ರವನ್ನು ನೀಡಲಾಯಿತು.

**– ಕಲಾಶ್ರೀ ಗಣೇಶ್ ಉಡುಪ**

# ಗದುಗಿನ ಭಾರತ ಪ್ರಬುದ್ಧ ಕೃತಿ: ಡಾ. ಕಬ್ಬಿನಾಲೆ (ನುಡಿ ನಮನ–121)

ಕಾರ್ಕಳದಲ್ಲಿ ಕಾಂತವರ ಕನ್ನಡ ಸಂಘದ ವತಿಯಿಂದ ಆಯೋಜಿಸಿದ್ದ ಕುಮಾರವ್ಯಾಸ ಕಾವ್ಯರಸಗ್ರಹಣ ಕಾರ್ಯಕ್ರಮದಲ್ಲಿ ಕಬ್ಬಿನಾಲೆ ವಸಂತ ಭಾರದ್ವಾಜರವರು 'ಕವಿ ಕುಲಗುರು ಕುಮಾರವ್ಯಾಸ' ಕನ್ನಡ ವರಕವಿ ದ.ರಾ. ಬೇಂದ್ರೆಯವರು ಕುಮಾರವ್ಯಾಸ ಭಾರತವನ್ನು ಪ್ರತಿ ಪರ್ವ ರಸೋದಯವೆಂದು ಕೊಂಡಾಡಿದ್ದಾರೆ. "ಕಬ್ಬಿನ ಕೋಲಿನಲ್ಲಿ ಕೆಲವೊಂದು ಗಂಟುಗಳಲ್ಲಾದರೂ ರಸವಿಲ್ಲದೇ ಇರಬಹುದು; ಆದರೆ ಗದುಗಿನ ಭಾರತ ಹಾಗಲ್ಲ" ಎಂದು ಅಭಿಪ್ರಾಯಪಟ್ಟರು.

ಗದುಗಿನ ಭಾರತದಲ್ಲಿ ಚಾರುಕವಿತೆಯನ್ನು ಬಳಸದೆ ಕಾವ್ಯಕ್ಕೆ ಗುರುವೆನಲು ರಚಿಸಿದ ಕುಮಾರವ್ಯಾಸನ ಪ್ರತಿಭೆ ಶಬ್ದ, ಅರ್ಥ ಮತ್ತು ಪ್ರಮಾಣಗಳೆಂಬ ಮೂರು ಆಯಾಮಗಳಲ್ಲಿ ಕಾವ್ಯದ ಶಕ್ತಿಯನ್ನು ಎತ್ತಿಹಿಡಿದಿದೆ ಎಂದರು.

ಕುಮಾರವ್ಯಾಸನ ಕರ್ನಾಟಕ ಭಾರತ ಕಥಾಮಂಜರಿ 'ಗದುಗಿನ ಭಾರತ' ಎಂದೇ ಕರೆಯಲಾಗುತ್ತದೆ. ಹತ್ತು ಪರ್ವಗಳ ಈ ಕಾವ್ಯವು ಶ್ರವಣಸುಧಾ ವಿನೂತನಕಥನ ಎಂಬ ಹೆಗ್ಗಳಿಕೆಯ ಕಾವ್ಯವಾಗಿದ್ದು, ಗಮಕ ಕಲೆಯ ಮೂಲಕ ಅದನ್ನು ಕೇಳಿ ಆನಂದಿಸುವುದು ಕನ್ನಡದ ಒಂದು ವಿಶೇಷ ಸಂಸ್ಕೃತಿ ಎಂದರು.

ಗಮಕ ಕಲಾಪರಿಷತ್ತಿನ ಉಡುಪಿ ಜಿಲ್ಲಾಧ್ಯಕ್ಷರಾಗಿರುವ ಗಮಕಿ ಸತೀಶ್‌ಕುಮಾರ್ ಕೆಮ್ಮಣ್ಣು ಅವರಿಂದ ಕುಮಾರವ್ಯಾಸ ಭಾರತದ ಆಯ್ದ ಪದ್ಯಗಳ ಗಮಕ ವಾಚನ ನಡೆಯಿತು. ಕನ್ನಡ ಪುಸ್ತಕ ಪ್ರಾಧಿಕಾರದಿಂದ ಯುವ ಬರಹಗಾರರ ಚೊಚ್ಚಲ ಕೃತಿ ಪ್ರೋತ್ಸಹ ಧನಕ್ಕೆ ಆಯ್ಕೆಯಾಗಿ ಪ್ರಕಟಗೊಂಡ ಚೇತನ ಬೋರುಗುಡ್ಡೆಯವರ 'ಮುರುಳಿಗಾನ' ಕವನ ಸಂಕಲನವನ್ನು ಡಾ.ವಸಂತ ಭಾರದ್ವಾಜರು ಲೋಕಾರ್ಪಣೆಗೊಳಿಸಿದರು. ಇತ್ತೀಚೆಗೆ ನಿಧನರಾದ ಬೇಲಾಡಿ ರಾಮಚಂದ್ರ ಗೌರವಾರ್ಥ ಮನ ಪ್ರಾರ್ಥನೆಯೊಂದಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.




ನುಡಿ ನಮನ –122

ದಿ: 11–2–2018 ರಂದುಕನ್ನಡ ಸಂಘ ಕಾಂತವರ(ರಿ) ಅವರ ವತಿಯಿಂದ ಕುಮಾರವ್ಯಾಸ ಭಾರತ ಕಥಾ ಸಂವಿಧಾನ ಆಧಾರಿತ ಉಪನ್ಯಾಸ ಮತ್ತು ಕಾವ್ಯ ವಾಚನವನ್ನು ಏರ್ಪಡಿಸಿಲಾಗಿತ್ತು. ಈ ಕಾರ್ಯಕ್ರಮದಲ್ಲಿ ಉಪನ್ಯಾಸ ಡಾ.ಪಾದೇಕಲ್ಲು ವಿಷ್ಣುಭಟ್ ಅವರಿಂದ ನೆರವೇರಿತು. ಕಾವ್ಯ ವಾಚನವನ್ನು ಡಾ. ಶ್ರೀಕಾಂತರಾವ್ ಸಿದ್ದಾಪುರ ನಡೆಸಿಕೊಟ್ಟರು. ಕಾರ್ಯಕ್ರಮವು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

ನುಡಿ ನಮನ–124

ದಿ: 8–04–2018 ರಂದು ನುಡಿ ನಮನ–124ನ್ನು ಕನ್ನಡ ಸಂಘ ಕಾಂತವರ ಅವರ ವತಿಯಿಂದ ಭಾಷೆ ಮತ್ತು ಶೈಲಿಯ ಬಗೆಗಿನ ಉಪನ್ಯಾಸ ಮತ್ತು ಕಾವ್ಯವಾಚನವನ್ನು ಏರ್ಪಡಿಸಲಾಗಿತ್ತು. ಉಪನ್ಯಾಸವು ಡಾ. ಧನಂಜಯ ಕುಂಬ್ಳೆ ಅವರಿಂದ ಹಾಗೂ ವಾಚನವು ಶ್ರೀ ಹೆಚ್.ಯಜ್ಞೇಶ್ ಆಚಾರ್ ಅವರಿಂದ ನೆರವೇರಿತು.

# ಕಾವ್ಯಾರ್ಥ ಚಿಂತನ



**ಡಾ. ಎ.ವಿ. ಪ್ರಸನ್ನ**
ಬೆಂಗಳೂರು

**ಲಕ್ಷ್ಮೀಶನ ಜೈಮಿನಿ ಭಾರತದ ಒಂದು ಪದ್ಯ**

ಇರುಳಂತೆ ಪಗಲಂತೆ ಮಖದಂತೆ ದಿವದಂತೆ
ವರಪಯೋನಿಧಿಯಂತೆ ಕೈಲಾಸ ಗಿರಿಯಂತೆ
ನಿರುತಮಂ ಸೋಮಾರ್ಕಶಿಖಿ ಸಹಸ್ರಾಕ್ಷ ಹರಿನುತ ಶಿವಾವಾಸಮಾಗಿ ।
ಧುರದಂತೆ ಕೊಳದಂತೆ ಕಡಲಂತೆ ನಭದಂತೆ
ಶರಪುಂಡರೀಕ ವಿದ್ರುಮ ಋಕ್ಷಮಯದೊಳಿಡಿ
ದಿರುತಿರ್ದುದಾ ಮಹಾಟವಿ ಜಾನಕಿಯ ಕಣ್ಗೆ ಘೋರತರಮಾಗಿ ಮುಂದೆ ॥

(**ಜೈಮಿನಿ ಭಾರತ** : 19-9)

ಸೀತಾ ಪರಿತ್ಯಾಗದ ಪ್ರಸಂಗದಲ್ಲಿ, ಲಕ್ಷ್ಮಣನು ಸೀತೆಯನ್ನು ಕರೆದುಕೊಂಡು ಬಂದ, ಕಾಡು ಅವಳ ಕಣ್ಣಿಗೆ ಕಂಡುದನ್ನು ಕವಿ ಇಲ್ಲಿ ಚಿತ್ರಿಸಿದ್ದಾನೆ. ಅದರ ತಾತ್ಪರ್ಯವನ್ನು ಹೀಗೆ ಕೊಡಲಾಗಿದೆ:

'ವನಮೃಗ ಗಜಾದಿಗಳಿಂದ ವ್ಯಾಪ್ತವಾದ ಈ ಘೋರಾರಣ್ಯವು ಇರುಳಂತೆಯೂ, ಪಗಲಿನಂತೆಯೂ, ಮಖದಂತೆಯೂ, ಸ್ವರ್ಗದಂತೆಯೂ ಶ್ರೇಷ್ಠತರವಾದ ಕ್ಷೀರ ಸಮುದ್ರದಂತೆಯೂ ಕೈಲಾಸ ಗಿರಿಯಂತೆಯೂ, ಸರ್ವದಾ ಚಂದ್ರನು , ಅರ್ಕನು, ಶಿಖಿಯು, ದೇವೇಂದ್ರನು, ಹರಿಯು ಇವರುಗಳಿಂದ ಶ್ಲಾಘ್ಯನಾದ ಶಂಕರನಿಗೆ ವಾಸಸ್ಥಾನವುಳ್ಳದ್ದಾಗಿಯೂ, ಧುರದಂತೆಯೂ, ಸರೋವರದಂತೆಯೂ, ಕಡಲಂತೆಯೂ, ನಭದಂತೆಯೂ, ನೀರಿನ ಪುಂಡರೀಕಗಳ, ಹವಳದ ಲತೆಗಳ, ನಕ್ಷತ್ರ ಗಳ ಪ್ರಾಚುರ್ಯದಿಂದಲೂ ವ್ಯಾಪ್ತಮಾದುವಾಗಿ, ಈ ಘೋರಾರಣ್ಯವು ಸೀತಾದೇವಿಯ ನೇತ್ರಗಳಿಗೆ ಅತ್ಯಂತ ಕ್ರೂರತಮವಾಗಿ ಕಂಡು ಬಂದಿತು.' (ಟೀಕಾ ತಾತ್ಪರ್ಯ ಸಹಿತ ಜೈಮಿನಿ ಭಾರತವು, ಪುಟ 498. ಸಂ.- ದೊಡ್ಡ ಬೆಲೆ ನಾರಾಯಣ ಶಾಸ್ತ್ರಿ, ಚಿಕ್ಕಪೇಟೆ ಬುಕ್ ಡಿಪೋ -1912)

ಈ ಅರ್ಥವನ್ನು ಪರಿಶೀಲಿಸಿದಾಗ, ಒಂದಕ್ಕೊಂದು ಸಂಬಂಧವೇ ಇಲ್ಲದಿರುವುದು ತಿಳಿಯುತ್ತದೆ. 'ಸೀತೆಯು ಕಣ್ಣಿಗೆ ಘೋರಾರಣ್ಯವು ಕಂಡಿತು.'ಎಂದು ಹೇಳುವಲ್ಲಿ, ಇರುಳಂತೆ, ಹಗಲಂತೆ, ಚಂದ್ರನಂತೆ, ಸೂರ್ಯನಂತೆ, ಶಿವನಂತೆ, ಸ್ವರ್ಗದಂತೆ, ಹವಳದಂತೆ, ಇತ್ಯಾದಿಗಳ ಉಪಮೆಯು ಸಾರ್ಥಕವಾಗುವುದಿಲ್ಲ. ಈ ಪದ್ಯದಲ್ಲಿ ಬೇರೊಂದು ಚಮತ್ಕಾರವಿದೆ. ಅದು ಹೀಗಿದೆ: ಮೊದಲ ಎರಡು ಸಾಲುಗಳಲ್ಲಿ ಬರುವ ಪ್ರತಿಯೊಂದು ಶಬ್ದಕ್ಕೂ ಮೂರನೆಯ ಸಾಲಿನಲ್ಲಿ ಬರುವ ಶಬ್ದಗಳ ಸಂಬಂಧವಿದೆ ಹಾಗೂ ನಾಲ್ಕನೆಯ ಸಾಲಿನಲ್ಲಿ ಬರುವ ಶಬ್ದಗಳೆಲ್ಲಕ್ಕೂ ಐದನೆಯ ಸಾಲಿನಲ್ಲಿ ಇರುವ ಶಬ್ದಗಳ ಸಂಬಂಧವಿದೆ. ಮೊದಲ ಸಾಲಿನಲ್ಲಿ ಶಬ್ದ 'ಇರುಳಂತೆ' ಎಂಬುದಕ್ಕೆ ಮೂರನೆಯ ಸಾಲಿನ ಮೊದಲ ಶಬ್ದ 'ಸೋಮ' ಎಂಬ ಸಂಬಂಧ ಶಬ್ದ. ಎಂದರೆ ರಾತ್ರಿಯಲ್ಲಿನ ಚಂದ್ರನಂತೆ ಎಂದು ; ಹಾಗೆಯೇ ಮುಂದುವರಿದರೆ, ಪಗಲದಂತೆ - ಅರ್ಕ ( ಹಗಲು-ಸೂರ್ಯ), ಮಖದಂತೆ -ಶಿಖಿ (ಯಜ್ಞ-ಬೆಂಕಿ), ದಿವಿ ಸಹಸ್ರಾಕ್ಷ (ಸ್ವರ್ಗ-ಇಂದ್ರ), ಪಯೋನಿಧಿ -ಹರಿನುತ (ಸಮುದ್ರ-ಚಂದ್ರ ?) ಕೈಲಾಸ -ಶಿವಾವಾಸ (ಕೈಲಾಸ ಪರ್ವತ-ಈಶ್ವರ) ಹಾಗೆಯೇ ನಾಲ್ಕನೇ ಸಾಲಿನ ಮೊದಲ ಶಬ್ದ 'ಧುರ' ಅದಕ್ಕೆ ಸಂಬಂಧಿಸಿದಂತೆ ಐದನೇ ಸಾಲಿನ ಮೊದಲ ಶಬ್ದ ಶರ, (ಯುದ್ಧ-ಬಾಣ); ಹಾಗೆಯೇ ನಾಲ್ಕನೇ ಶಬ್ದ ಶರ, ಕೊಳ-ಪುಂಡರೀಕ (ಕೊಳ-ಬಿಳಿಯ ತಾವರೆ)ಕಡಲು -ವಿದ್ರುಮ (ಸಮುದ್ರ -ಹವಳ ), ನಭ-ಋಕ್ಷ (ಆಕಾಶ -ನಕ್ಷತ್ರ).

ಹೀಗೆ ಪ್ರತಿಯೊಂದು ಶಬ್ದಕ್ಕೂ ಸಂಬಂಧವನ್ನು ದೂರಾನ್ವಯದಲ್ಲಿ ಚಮತ್ಕಾರಿಕವಾಗಿ ಕಲ್ಪಿಸಿರುವುದೇ ಅಲ್ಲದೆ, ಇಲ್ಲಿ ಬಳಸಿರುವ ಪ್ರತಿಯೊಂದು ಶಬ್ದಕ್ಕೂ ಮೇಲ್ಕಂಡ ಅರ್ಥದ ಜೊತೆಗೇ ಕಾಡಿನಲ್ಲಿರುವ ಗಿಡ-ಮರ-ಬಳ್ಳಿ - ಪ್ರಾಣಿ - ಪಕ್ಷಿಗಳ ಅರ್ಥವೂ ಬರುವಂತೆ ಶ್ಲೇಷೆಯನ್ನು ಕಲ್ಪಿಸಲಾಗಿದೆ. 'ಸೋಮ' ಶಬ್ದಕ್ಕೆ ಚಂದ್ರ ಎಂಬ ಅರ್ಥವಿರುವಂತೆ ಒಂದು ರೀತಿಯ ಬಳ್ಳಿ (ಸೋಮ ರಸ ತಯಾರಿಸುವ)ಎಂಬ ಅರ್ಥವು ಇದೆ; ಹಾಗೆಯೇ ಅರ್ಕ-ಎಕ್ಕದ ಗಿಡ, ಶಿಖಿ - ನವಿಲು, ಸಹಸ್ರಾಕ್ಷ -ನವಿಲು, ಹರಿನುತ?, ಶಿವಾ - ನರಿ, ಮುಂತಾಗಿ ಕಾಡಿನ ಸಸ್ಯ- ಪ್ರಾಣಿ ವಿಶೇಷಗಳನ್ನು ಹೇಳುವಾಗ ಚಮತ್ಕಾರಿಕವಾಗಿ ಅವುಗಳಿಗೆ ಬೇರೆ ಬೇರೆ ಅರ್ಥಗಳನ್ನೂ ಸಂಬಂಧಗಳನ್ನೂ ಕಲ್ಪಿಸಿರುವುದರಿಂದ ಇದು 'ಚಿತ್ರ ಕಾವ್ಯ'ವಾಗುತ್ತದೆ. ಆದರೆ ಇದರಿಂದ ಕಾವ್ಯದ ಸಂದರ್ಭಕ್ಕೆ ಯಾವುದೇ ಪ್ರಯೋಜನವೂ ಇಲ್ಲದೆ ಕೇವಲ ಚಮತ್ಕಾರವಾಗಿ ಮಾತ್ರ ಉಳಿದು ಬಿಡುತ್ತದೆ ಎಂಬುದನ್ನು ಇಲ್ಲಿ ಗಮನಿಸಬೇಕು.

# ವ್ಯಾಖ್ಯಾನದ ಪೂರ್ವಸಿದ್ಧತೆಗಳು



ಶ್ರೀಮತಿ ಶಾಂತಾಗೋಪಾಲ್
ಬೆಂಗಳೂರು

ಗಮಕ ಕಲೆ ಅಥವಾ ಕಾವ್ಯವಾಚನ ಕಲೆಯಲ್ಲಿ ವಾಚನ ಮಾಡುವ ಗಮಕಿಯ ಜೊತೆಗೆ ವ್ಯಾಖ್ಯಾನಕಾರರ ಉಪಸ್ಥಿತಿ ಇಂದಿನ ದಿನಗಳಲ್ಲಿ ಅನಿವಾರ್ಯವಾದ ಅಗತ್ಯವಾಗಿದೆ. ತನ್ನ ಆರಂಭದ ದಿನಗಳಲ್ಲಿ ಈ ಕಲೆಯ ಸ್ವರೂಪ ಹೇಗಿತ್ತು ಎಂಬುದನ್ನು ಇದಮಿತ್ಥಂ ಎಂದು ಹೇಳುವುದು ಕಷ್ಟ. ಸಮರ್ಥರಾದ ಗಮಕಿಗಳೇ ವಾಚನ ಮಾಡಿ ಅಗತ್ಯ ಕಂಡು ಬಂದ ಕಡೆ ಒಂದೆರಡು ಮಾತುಗಳಲ್ಲಿ ವಾಚಿಸಿದ ಪದ್ಯದ ವಿಶೇಷಾರ್ಥವನ್ನೋ, ಇಲ್ಲ ಅಸ್ಪಷ್ಟತೆಯು ತಲೆದೋರಿದಾಗ ಅದನ್ನು ನಿವಾರಿಸುತ್ತಾ ಇದ್ದರು ಎಂಬುದನ್ನು ಕೇಳಿಬಲ್ಲೆವು. ಆದರೆ ಇಂದು ಪರಿಸ್ಥಿತಿ ಹಾಗಿಲ್ಲ. ವ್ಯಾಖ್ಯಾನವಿಲ್ಲದ ಗಮಕವು ರಾಗಗಳ ಕಿಂಕಾಪಿನ ಶಾಲು ಹೊದ್ದು ಕೇಳುಗರನ್ನು ರಂಜಿಸಬಲ್ಲದು. ಆದರೆ ತನ್ನ ಮುಖ್ಯ ಉದ್ದೇಶವಾದ ಕಾವ್ಯಾರ್ಥದ ಸಂವಹನ ಮಾಡಲಾರದು. ಈ ಬದಲಾದ ಪರಿಸ್ಥಿತಿಗೆ ಕಾರಣವೇನು? ಎಂದು ಯೋಚಿಸಿದಾಗ ಕಾಲಕಾಲಕ್ಕೆ ಬದಲಾಗುವ ಜನರ ಅಭಿರುಚಿ ಇರಬಹುದು. ದಿನದಿಂದ ದಿನಕ್ಕೆ ತೆಳುವಾಗುತ್ತಾ ಹೋಗಿ ತನ್ನ ಗಟ್ಟಿತನವನ್ನು ಕಳೆದುಕೊಂಡಿರುವ ಶಾಲಾ–ಕಾಲೇಜುಗಳ ಕನ್ನಡ ಭಾಷೆಯ ಬೋಧನೆಯೂ ಕಾರಣವಾಗಿರಬಹುದು. ಹೇಗೂ ಇರಲಿ ಈ ಹೊತ್ತು ವೇದಿಕೆಯಲ್ಲಿ ಪ್ರಸ್ತುತ ಪಡಿಸುವ ಗಮಕದ ಕಾರ್ಯಕ್ರಮಗಳು ಜೋಡೆತ್ತಿನ ಗಾಡಿಯಾಗಿವೆ ಎನ್ನುವುದೇ ವಾಸ್ತವ. ಈ ವಾಸ್ತವವನ್ನು ಒಪ್ಪಿಕೊಂಡ ಬಳಿಕ ವ್ಯಾಖ್ಯಾನಕಾರರ ಹೊಣೆಗಾರಿಕೆ ಹೆಚ್ಚಾಗಿದೆ. ಅವರು ತಮ್ಮ ಜವಾಬ್ದಾರಿಯನ್ನು ಅರಿತು ವ್ಯಾಖ್ಯಾನಕ್ಕೆ ಸಿದ್ಧವಾಗಬೇಕಾಗುತ್ತದೆ. ವ್ಯಾಖ್ಯಾನಕಾರರ ಮಾತುಗಾರಿಕೆ ಕೇವಲ ವಾಚಾಟತನವಾಗದೆ ಕಲೆಯ ಮಟ್ಟವನ್ನು ಮುಟ್ಟಬೇಕು. ಅರ್ಥಗಾಂಭೀರ್ಯದಿಂದ ಕೂಡಿ, ಕಾವ್ಯದಲ್ಲಿ ಹುದುಗಿರುವ ರಸಗ್ರಂಥಿಗಳನ್ನು ಬಿಚ್ಚಿಡುತ್ತಾ, ಕಾವ್ಯಾರ್ಥಚಿಂತನೆಯ ಮಟ್ಟಕೇರಿದರೆ ಗಮಕ ಕಲೆಯ ಉದ್ದೇಶ ಸಾರ್ಥಕವಾದೀತು. ಸತತ ಪರಿಶ್ರಮವನ್ನು ಬೇಡುವ ಕೆಲಸವಿದು. ದೈವದತ್ತವಾದ ಮಾತುಗಾರಿಕೆಯನ್ನು ಪರಿಶ್ರಮ, ಅಧ್ಯಯನ ಮತ್ತು ಲೋಕಾನುಭವಗಳಿಂದ ಬಲಗೊಳಿಸಬೇಕಾಗುತ್ತದೆ.

ಈ ಎಲ್ಲಕ್ಕೂ ಮೊದಲು ವ್ಯಾಖ್ಯಾನಿಸಲು ಬೇಕಾದ ಕೆಲವು ಅಗತ್ಯವಾದ ಅಂಶಗಳನ್ನು ಗಮನಿಸಿಕೊಳ್ಳಬೇಕಾಗುತ್ತದೆ. ಈ ಅಂಶಗಳನ್ನೇ ವ್ಯಾಖ್ಯಾನದ ಪೂರ್ವಸಿದ್ಧತೆಗಳು ಎಂದು ಕರೆಯಬಹುದೇನೋ. ಅದರಲ್ಲೂ ವ್ಯಾಖ್ಯಾನಕ್ಷೇತ್ರದಲ್ಲಿ ಹೊಸದಾಗಿ ತಮ್ಮನ್ನು ತೊಡಗಿಸಿಕೊಂಡು ಬೆಳೆಯುತ್ತಿರುವ, ತೊಡಗಿಸಿಕೊಳ್ಳಬೇಕು ಎಂಬ ಹಂಬಲವಿರುವವರಿಗೆ ಈ ಪೂರ್ವಸಿದ್ಧತೆಗಳು ತುಂಬಾ ಅಗತ್ಯ. ಸಹಾಯಕವೂ ಕೂಡ.

**ಪದ್ಯದ ಅರ್ಥವನ್ನು ಕಂಡುಕೊಳ್ಳುವುದು ಹೇಗೆ?**

ಸಾಹಿತ್ಯ–ಸಂಗೀತಗಳ ಮಧುರಮೈತ್ರಿಯನ್ನು ಸಾಧಿಸಿಕೊಂಡಿರುವ ಕಲೆ ಗಮಕ. ಗಮಕ ಕಲೆಯ ಜೀವ –ಜೀವಾಳವೇ ಕಾವ್ಯಗಳು. ಅದರಲ್ಲೂ ಛಂದೋವೃತ್ತಗಳಲ್ಲಿರುವ ಹಳೆಗನ್ನಡ, ನಡುಗನ್ನಡದ ಕಾವ್ಯಗಳು. ಶಬ್ದಶರೀರಿಯಾಗಿರುವ ಕಾವ್ಯಗಳನ್ನು ಅರ್ಥಮಾಡಿಕೊಳ್ಳಲು ಮೊದಲಿಗೆ ಶಬ್ದಗಳನ್ನೇ ಆಶ್ರಯಿಸಬೇಕಾಗುತ್ತದೆ.

ನಮ್ಮಲ್ಲಿ(ಭಾರತೀಯರಲ್ಲಿ) ಗದ್ಯ ಎಂಬ ಸಾಹಿತ್ಯಪ್ರಕಾರವೇ ಇಲ್ಲದಿದ್ದ ಕಾಲವೊಂದಿತ್ತು. ಆಗ ಪದ್ಯಗಳನ್ನೋ, ಶ್ಲೋಕಗಳನ್ನೋ ಒಂದು ಕ್ರಮದಿಂದ ಅರ್ಥಮಾಡಿಕೊಳ್ಳುವ ಪದ್ಧತಿಯಿತ್ತು. ಅದನ್ನು 'ಅನ್ವಯಕ್ರಮ' ಅಥವಾ 'ಆಕಾಂಕ್ಷಾ ಪದ್ಧತಿ' ಎಂದು ಕರೆಯುತ್ತಾರೆ. ದುರ್ವ್ಯಾಖ್ಯೆಯ ವಿಷದಿಂದ ಮೂರ್ಛಾವಸ್ಥೆಯಲ್ಲಿದ್ದ ಕವಿಕುಲಗುರು ಕಾಳಿದಾಸನ ಕಾವ್ಯಗಳನ್ನೂ ಸೇರಿದಂತೆ ಹಲವು ಸಂಸ್ಕೃತ ಕಾವ್ಯಗಳನ್ನು ತನ್ನ ಅನುಪಮ ವ್ಯಾಖ್ಯಾನದಿಂದ ಸಪ್ರಾಣಗೊಳಿಸಿದ ಮಲ್ಲಿನಾಥಸೂರಿ ಅನ್ವಯಕ್ರಮದಿಂದಲೇ(ಇಹ ಅನ್ವಯಮುಖೇನೈವ ಸರ್ವಂ ವ್ಯಾಖ್ಯಾಯತೇ ಮಯಾ) ನಾನು ಕಾವ್ಯಗಳನ್ನು ವ್ಯಾಖ್ಯಾನಿಸುತ್ತೇನೆ ಎಂದಿದ್ದಾನೆ. ಕಾಲದ ಪರೀಕ್ಷೆಯನ್ನು ಗೆದ್ದಿರುವ ಇದು ಇಂದಿಗೂ ಉಪಯೋಗೀ ಪದ್ಧತಿಯೇ ಆಗಿದೆ. ಈ ಪದ್ಧತಿಯಲ್ಲಿರುವ ಹಂತಗಳೆಂದರೆ–

ಮೊದಲಿಗೆ ಪದ್ಯದಲ್ಲಿನ ಪದಗಳನ್ನು, (ಸಂಧಿಯಾಗಿದ್ದರೆ ಸಂಧಿಯನ್ನು ಒಡೆದು) ಪದಗಳನ್ನು ವಿಭಾಗಿಸಿಕೊಳ್ಳಬೇಕು. ಹೀಗೆ ಮಾಡಿದಾಗ ಬಿಡಿ–ಬಿಡಿಯಾದ ಪದಗಳು ಸಿಗುತ್ತವೆ.

ಹೀಗೆ ವಿಭಾಗಿಸಿರುವ ಪದಗಳನ್ನು ಪದ್ಯದಲ್ಲಿರುವ ಕ್ರಿಯಾಪದದ ಜೊತೆಗೆ ಅನ್ವಯಮಾಡುತ್ತಾ

(ಸಂಬಂಧಪಡಿಸುತ್ತಾ ) ಪದ್ಯವನ್ನು ಗದ್ಯದ ಸಾಲುಗಳಂತೆ ರೂಪಾಂತರ ಮಾಡಬಹುದು. ಹೀಗೆ ಮಾಡುವುದರಿಂದ ಒಟ್ಟಾರೆ ಪದ್ಯದ ಅರ್ಥಗ್ರಹಿಕೆಗೆ ಅನುಕೂಲವಾಗುತ್ತದೆ.

ನಂತರ ಅರ್ಥ ತಿಳಿಯದ ಪದಗಳನ್ನು ಗುರುತಿಸಬೇಕು. ಶಬ್ದಕೋಶಗಳ ಸಹಾಯದಿಂದ ಅರ್ಥವನ್ನು ಅರಿತು ಸಂರ್ಭಕ್ಕೆ ಹೊಂದಿಕೆಯಾಗುವಂತಹ ಅರ್ಥವನ್ನು ಗ್ರಹಿಸಬೇಕಾಗುತ್ತದೆ.

**ಶಬ್ದಶಕ್ತಿ**

ಶಬ್ದಗಳು ಹೊರಹೊಮ್ಮಿಸುವ ಅರ್ಥವನ್ನೇ ಅದರ ಶಕ್ತಿ ಎನ್ನಬಹುದು. ಇದಕ್ಕೆ ಶಬ್ದವೃತ್ತಿ ಎಂಬ ಮತ್ತೊಂದು ಹೆಸರೂ ಇದೆ. ಶಬ್ದದ ಈ ಶಕ್ತಿಯಿಂದಲೇ ಕಾವ್ಯವು 'ನಿತ್ಯನವನವೋನ್ಮೇಷಶಾಲಿಯಾದ ಅರ್ಥವನ್ನು ಹೊಮ್ಮಿಸುವ ಸಾಮರ್ಥ್ಯವನ್ನು ಪಡೆದುಕೊಂಡಿದೆ. ಶಬ್ದಶಕ್ತಿಯನ್ನು ಲಾಕ್ಷಣಿಕರು ಮೂರು ಬಗೆಯಲ್ಲಿ ಗುರುತಿಸಿದ್ದಾರೆ. 1.ಅಭಿಧಾವೃತ್ತಿ (ಅಭಿಧಾರ್ಥ), 2. ಲಕ್ಷಣಾವೃತ್ತಿ(ಲಕ್ಷಣಾರ್ಥ) 3. ವ್ಯಂಜನಾವೃತ್ತಿ (ವ್ಯಂಗ್ಯಾರ್ಥ)

1.ಅಭಿಧಾವೃತ್ತಿ : ಪುಸ್ತಕ, ನೀರು, ವಾಹನ, ಮನೆ ಎಂಬ ಶಬ್ದಗಳನ್ನು ಕೇಳಿದ ಕೂಡಲೇ ನಮಗೆ ನೇರವಾಗಿ ತಿಳಿಯುವ ಅರ್ಥ. ಆ ಶಬ್ದವು ಸಂಕೇತಿಸುತ್ತಿರುವ ವಸ್ತು ಯಾವುದು ಎಂಬುದರ ಅರಿವು ಆ ಶಬ್ದವನ್ನು ಕೇಳಿದಕೂಡಲೇ ಆಗಿ ಬಿಡುತ್ತದೆ. ಇದನ್ನು ಅಭಿಧೇಯಾರ್ಥ, ವಾಚ್ಯಾರ್ಥ, ಮುಖ್ಯಾರ್ಥ ಎಂದೂ ಕರೆಯುವುದುಂಟು. ಪ್ರತಿಯೊಂದು ಭಾಷೆಯ ಶಬ್ದಕೋಶಗಳು, ನಿಘಂಟುಗಳೂ ಈ ವಾಚ್ಯಾರ್ಥವನ್ನೇ ಕೊಟ್ಟಿರುತ್ತವೆ.

2.ಲಕ್ಷಣಾವೃತ್ತಿ : ಹಲವೊಂದು ಸಂದರ್ಭದಲ್ಲಿ ವಾಚ್ಯಾರ್ಥವು ಕಾವ್ಯದ ಸಂದರ್ಭಕ್ಕೋ, ನಿತ್ಯಜೀವನದ ವ್ಯವಹಾರಕ್ಕೋ ಹೊಂದದೇ ಹೋಗುತ್ತದೆ. ಅಂದರೆ ವಾಚ್ಯಾರ್ಥಕ್ಕೆ ಬಾಧೆ ಉಂಟಾಗುತ್ತದೆ. ಆಗ ವಾಚ್ಯಾರ್ಥವನ್ನು ಕೈಬಿಟ್ಟು (ನಿರಾಕರಿಸಿ) ಸಂದರ್ಭಕ್ಕೆ ಹೊಂದುವಂತಹ ಮತ್ತೊಂದು ಅರ್ಥವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಇದನ್ನ ಶಬ್ದದ ಲಕ್ಷಣಾವೃತ್ತಿ ಎನ್ನುತ್ತಾರೆ. ಉದಾಹರಣೆಗೆ " ಅವನ ಬುದ್ಧಿ ಪಾದರಸ' ಅಥವಾ 'ಅವನು ಪಾದರಸ" ಎಂಬ ಮಾತುಗಳಲ್ಲಿ ವಾಚ್ಯಾರ್ಥ ನೇರವಾಗಿ ಹೊಂದುವುದಿಲ್ಲ. ಆಗ 'ಪಾದರಸ' ಎಂಬುದಕ್ಕೆ 'ಚುರುಕುತನ' ಎಂಬ ಲಕ್ಷಣೆಯ ಅರ್ಥವನ್ನು ಹೊಂದಿಸಿಕೊಂಡು ಅರ್ಥ ಮಾಡಬೇಕಾಗುತ್ತದೆ. 'ಕೇರಿಗೆ ಕೇರಿಯೇ ಕಣ್ಣೀರು ಸುರಿಸಿತು" , 'ಊರಿಗೆಊರೇ ಕೊಂಡಾಡಿತು' 'ಅವನು ಬೃಹಸ್ಪತಿ" 'ಅವನು ನರಿಬುದ್ಧಿಯವ' 'ಮುಖ ಅರಳಿದೆ'ಎಂಬಲ್ಲೆಲ್ಲಾ ಲಾಕ್ಷಣಿಕಾರ್ಥಗಳೇ ಗ್ರಹಿಸಬೇಕಾದ್ದು. ನಿತ್ಯಜೀವನದಲ್ಲಿ ಬಳಕೆಯಾಗುವ ಮಾತುಗಳನ್ನು ಗಮನಿಸಿದರೆ ಲೋಕಜೀವನದಲ್ಲಿ ನಾವು ಹೆಚ್ಚಾಗಿ ಕಾಣುವುದು ಶಬ್ದದ ಲಕ್ಷಣಾವೃತ್ತಿಯ ಮೇಲುಗೈಯನ್ನೇ.

3. ವ್ಯಂಜನಾ ವೃತ್ತಿ : ಲೋಕದಲ್ಲಿ ಸಾಮಾನ್ಯವಾಗಿ ಉಪಯೋಗಿಸುವ ಲಕ್ಷಣೆಯ ಪದಗಳಿಗೆ ಅಂತಹ ವಿಶೇಷ ಪ್ರಯೋಜನವು ಕಾಣುವುದಿಲ್ಲ. ಕೇವಲ ರೂಢಿಯಿಂದ ಅರ್ಥವು ಹೊಳೆಯುತ್ತಾ ಹೋಗುತ್ತಿರುತ್ತದೆ. ಆದರೆ ಕವಿಯು ತನ್ನ ಕಾವ್ಯದಲ್ಲಿ ಲಕ್ಷಣಾವೃತ್ತಿಯನ್ನು ಅವಲಂಬಿಸಿ ಶಬ್ದಪ್ರಯೋಗ ಮಾಡಿದಾಗ ಅದು ತಟ್ಟನೆ ಓದಗರನ್ನು ಸೆಳೆದು ನಿಲ್ಲಿಸುತ್ತದೆ. ಕವಿ ಹೇಳಬೇಕೆಂದಿರುವ ಅರ್ಥದ ಜೊತೆಜೊತೆಗೆ ಹೇಳದೇ ಬಿಟ್ಟಿರಬಹುದಾದ ನೂರಾರು ಅರ್ಥಗಳು ಹೊಮ್ಮುತ್ತವೆ. ಈ ಬಗೆಯ ಶಬ್ದವ್ಯಾಪಾರವನ್ನು ವ್ಯಂಜನಾ ವ್ಯಾಪಾರ, ವ್ಯಂಜನಾವೃತ್ತಿ, ವ್ಯಂಗ್ಯಾರ್ಥ ಎಂದು ಕರೆಯುತಾರೆ. ಉದಾಹರಣೆಯ ಮೂಲಕ ವ್ಯಂಜನಾವ್ಯಾಪಾರದ ಸೊಗಸನ್ನು ನೋಡಬಹುದು– ಕುಮಾರವ್ಯಾಸಭಾರತದ ಸಭಾಪರ್ವದಲ್ಲಿ ಬರುವ ದ್ರೌಪದಿಯ ಸೀರೆಯನ್ನು ಸೆಳೆಯುವ ಪ್ರಸಂಗ. ಅಸಹಾಯಕಳಾಗಿ ನಿಂತ ದ್ರೌಪದಿ " ಪತಿಗಳೆನ್ನನು ಮಾರಿ ಧರ್ಮಸ್ಥಿತಿಯ ಕೊಂಡರು" ಎಂದು ಹಲುಬುತ್ತಾಳೆ. 'ತನ್ನ ಗಂಡಂದಿರು ಧರ್ಮವನ್ನು ಉಳಿಸಿಕೊಳ್ಳುವುದಕ್ಕಾಗಿ, ಪತ್ನಿಗೆ ಮಾನಭಂಗವಾಗುತ್ತಿದ್ದರೂ ಅವಳ ಯೋಚನೆಯನ್ನು ಬಿಟ್ಟರು' ಎಂಬುದು ಉದ್ದೇಶಿತವಾದ ಅರ್ಥ. ಕವಿ ಅದನ್ನು ಹೀಗೇಯೇ ಹೇಳಿದ್ದರೆ ಸಪ್ಪೆಯಾಗಿ ಕಾಣುತ್ತಿತ್ತು. ಆದರೆ ಲಕ್ಷಣಾವೃತ್ತಿಯಿಂದ ಹೇಳಿ ಇಲ್ಲಿ ಅತಿಶಯವಾದ ಅರ್ಥವು ಹೊಳೆಯುವಂತೆ ಮಾಡಿದ್ದಾನೆ ಎಂಬುದು ಗಮನಿಸಬೇಕಾದ್ದು. ಇಲ್ಲಿ ಯಾವ ಮಾರಾಟ–ಕೊಳ್ಳಾಟವೂ ನಡೆದಿಲ್ಲ. ಆದರೆ ದ್ರೌಪದಿ ತನ್ನನ್ನು ಮಾರಿ ಅದಕ್ಕೆ ಪ್ರತಿಯಾಗಿ ಧರ್ಮವನ್ನು ಕೊಂಡುಕೊಂಡಿದ್ದಾರೆ ಎಂದು ಹೇಳುತ್ತಾಳೆ. ಯಾವುದಕ್ಕೆ ಯಾವುದು ಬೆಲೆ. ಪತ್ನಿಯ ಮಾನರಕ್ಷಣೆಯೇ ಪತಿಯ(ಪತಿಗಳ) ಧರ್ಮ. ಅದನ್ನು ನಡೆಯಿಸದ ಇವರ ಈ ವ್ಯಾಪಾರ ಎಷ್ಟು ಅನುಚಿತ. ಅಂದರೆ ದ್ಯೂತವ್ಯಸನವು ಎಷ್ಟು ಅನುಚಿತವಾದದ್ದು. ಎಂಬ ಅಂಶಗಳೂ, ಪತಿಗಳ ವರ್ತನೆಯನ್ನು ಕುರಿತು ದ್ರೌಪದಿಯ ರೋಷ–ವ್ಯಥೆಗಳೂ ಎಷ್ಟು ಚೆನ್ನಾಗಿ ಅಭಿವ್ಯಕ್ತವಾಗುತ್ತದೆ. ಇದೇ ವ್ಯಂಗ್ಯಾರ್ಥ. ಉತ್ತಮವಾದ ಕಾವ್ಯಗಳಲ್ಲಿ ಇಂಥವು ನೂರಾರು. ಇಂಥಹ ಕಾವ್ಯಗಳನ್ನೇ ಧ್ವನಿಕಾವ್ಯವೆಂದೂ ಕರೆಯುವುದುಂಟು. ಧ್ವನಿಕಾವ್ಯವೇ ಉತ್ತಮಕೋಟಿಯ ಕಾವ್ಯ ಎಂದು ಕಾವ್ಯಮೀಮಾಂಸೆಯು ಹೇಳುತ್ತದೆ.

ಕವಿಯ ಪದ್ಯಗಳನ್ನು ಅರ್ಥಮಾಡಿಕೊಳ್ಳಲು ಮೇಲೆ ಹೇಳಿದ ಶಬ್ದದ ಮೂರೂ ವೃತ್ತಿಗಳನ್ನು ಗಮನಿಸಬೇಕಾಗುತ್ತದೆ.

**ಶಬ್ದಾರ್ಥಗ್ರಹಿಕೆಯ ಸಾಧನಗಳು**

1. ಶಬ್ದಕೋಶ

ವ್ಯಾಕರಣ, ಕೋಶ/ನಿಘಂಟುಗಳು, ವ್ಯಾವಹಾರಿಕವಾದ ಅನುಭವ ಇವೆಲ್ಲದರ ಸಹಾಯದಿಂದ ಕಾವ್ಯಗಳಲ್ಲಿ ಬಳಕೆಗೊಂಡಿರುವ ಶಬ್ದಗಳ ಸಂಕೇತಾರ್ಥ(ಸಾಮಾನ್ಯವಾದ ಅರ್ಥ)ಗಳನ್ನು ಗ್ರಹಿಸಬಹುದು. ಒಂದು ಪದ್ಯವನ್ನು ಪದವಿಭಾಗ ಮಾಡಿಕೊಂಡಬಳಿಕ ನೋಡಿದಾಗ ನಮಗೆ ಹಲವಾರು ಶಬ್ದಗಳ ಪರಿಚಯವೇ ಇಲ್ಲದೇ ಇರಬಹುದು. ನಮ್ಮ ಬುದ್ಧಿಶಕ್ತಿಗೆ ಮಿತಿ ಇರುವುದರಿಂದ ಎಲ್ಲವೂ ಗೊತ್ತೇ ಇರಬೇಕೆಂಬ ನಿರೀಕ್ಷೆಯೂ ಇರದು. ಶಬ್ದವು ಎದುರಿಗಿದ್ದರೆ ನಿಘಂಟನ್ನು ತೆಗೆದು ನೋಡಬಹುದು, ಹಿರಿಯರನ್ನು ಕೇಳಬಹುದು, ಅದು ಯಾವ ಸಂದರ್ಭದಲ್ಲಿ ಬಂದಿದೆ, ಒಂದು ಶಬ್ದಕ್ಕೆ ನಿಘಂಟುವಿನಲ್ಲಿ ಕೊಟ್ಟಿರುವ ಹಲವು ಅರ್ಥಗಳಲ್ಲಿ ಯಾವುದು ಸಮಂಜಸವಾಗುತ್ತದೆ ಎಂದು ನೋಡಿಕೊಳ್ಳಬಹುದು. ಈ ವಿಧಾನಗಳಿಂದ ಒಂದು ಶಬ್ದದ ವಾಚ್ಯಾರ್ಥವು ತಿಳಿಯುತ್ತದೆ. ಕವಿಯು ಈ ಶಬ್ದಗಳನ್ನು ಲಕ್ಷಣಾರ್ಥದಲ್ಲಿ ಬಳಸಿದ್ದಾನೋ ಇಲ್ಲವೋ, ವ್ಯಂಗ್ಯಾರ್ಥದ ಸಾಧ್ಯತೆ ಇದೆಯೇ ಎಂದು ತಿಳಿಯಲು ವಾಚ್ಯಾರ್ಥವೇ ಮೊದಲ ಮೆಟ್ಟಲು. ಹಾಗಾಗಿ ಪದ್ಯವನ್ನು ಅರ್ಥಮಾಡಿಕೊಳ್ಳಲು ನಿಘಂಟು/ಕೋಶಗಳು ಅತ್ಯಂತ ಉಪಯುಕ್ತವಾದ ಉಪಕರಣಗಳಾಗಿವೆ. ಕಾವ್ಯಾಭ್ಯಾಸಿಗಳ ಕೈದೀವಿಗೆಗಳಾಗಿವೆ.

ಒಂದು ಭಾಷೆಯಲ್ಲಿ ಹಲವಾರು ಶಬ್ದಕೋಶಗಳು ಬಳಕೆಯಲ್ಲಿರುತ್ತವೆ. ಕನ್ನಡದ ಮಟ್ಟಿಗೆ ಹೇಳುವುದಾದರೆ ಕನ್ನಡ ಸಾಹಿತ್ಯ ಪರಿಷತ್ತು ಹೊರತಂದಿರುವ 8 ಸಂಪುಟಗಳ ವಿಸ್ತೃತವಾದ ಕನ್ನಡ-ಕನ್ನಡ ನಿಘಂಟು ಕಲ್ಪವೃಕ್ಷ-ಕಾಮಧೇನು ಸದೃಶವಾದ ಆಕರವಾಗಿವೆ.ಈ ನಿಘಂಟುಗಳಲ್ಲಿ ಶಬ್ದಾರ್ಥಗಳನ್ನು ಕನ್ನಡ ಕಾವ್ಯಗಳಲ್ಲಿ ಕಂಡುಬರುವ ಆ ಶಬ್ದಗಳ ಪ್ರಯೋಗಗಳ ಉದಾಹರಣೆಗಳೊಂದಿಗೆ ಕೊಟ್ಟಿರುವುದು ತುಂಬಾ ಉಪಕಾರಿಯಾಗಿದೆ. ಅದರಲ್ಲೂ ಒಂದೇ ಶಬ್ದಕ್ಕೆ ಹಲವು ಅರ್ಥಗಳಿರುವಾಗ ನಾವು ಹುಡುಕಿ ಗ್ರಹಿಸಬೇಕಾದ ಅರ್ಥ ಯಾವುದು? ಎಂಬುದನ್ನು ತೀರ್ಮಾನಿಸಲು ಒಳ್ಳೆಯ ದಾರಿಯಾಗಿದೆ.

2. ಪೌರಾಣಿಕ ಕೋಶ

ಭಾರತೀಯ ಕಾವ್ಯಗಳ ರಚನೆಗೆ ಒದಗಿಬಂದಿರುವ ಪ್ರಮುಖವಾದ ಆಕರಗಳಲ್ಲಿ ಪುರಾಣಗಳ ಸ್ಥಾನ ಹಿರಿದಾದ್ದು. ಲೌಕಿಕ-ಅಲೌಕಿಕಗಳ ಅದ್ಭುತ ಸಾಮರಸ್ಯವನ್ನು ಸಾಧಿಸಿರುವ ನಮ್ಮ ಕಾವ್ಯಗಳಲ್ಲಿ ಋಷಿ-ಮುನಿಗಳು, ದೇವಾನುದೇವತೆಗಳು, ದೇವತೆಗಳ ವಾಹನಗಳು ಅವುಗಳ ಸಾರಥಿಗಳು, ಯಕ್ಷಗಂಧರ್ವರು ಹೀಗೆ ಎಲ್ಲರೂ ಕಾವ್ಯಗಳ ಭಾಗವೇ ಆಗಿ ಬಂದು-ಹೋಗುತ್ತಾ ಇರುತ್ತಾರೆ. ಇವರೆಲ್ಲರಿಗೆ ಸಂಬಂಧಿಸಿದ ಎಲ್ಲ ವಿವರಗಳನ್ನು ತಿಳಿದುಕೊಳ್ಳುವುದಾಗಲೀ, ನೆನಪಿನಲ್ಲಿ ಇರಿಸಿಕೊಳ್ಳುವುದಾಗಲೀ ಕಷ್ಟಸಾಧ್ಯ. ಕಾವ್ಯಗಳಲ್ಲಿ ಬರುವ ಪೌರಾಣಿಕ ಕಥೆ, ಪಾತ್ರಗಳು ಮೊದಲಾದುವುಗಳ ಸಂಬಂಧ-ಸಂದರ್ಭಗಳನ್ನು ಅರಿಯಲು 'ಪುರಾಣನಾಮ ಚೂಡಾಮಣಿ' (ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯದ ಪ್ರಕಟಣೆ, ಸಂ. ಬೆನಗಲ್ ರಾಮರಾವ್ ಮತ್ತು ಪಾನ್ಯಂ ಸುಂದರಶಾಸ್ತ್ರಿ) 'ಪುರಾಣ-ಭಾರತಕೋಶ' (ಸಂ. ಪಂಡಿತ ಐರೋಡಿ ಯಜ್ಞನಾರಾಯಣ ಉಡುಪ)ಗಳಂತಹ ಪೌರಾಣಿಕ ಕೋಶಗಳನ್ನು ಆಶ್ರಯಿಸಬೇಕಾಗುತ್ತದೆ.

ಇವುಗಳಲ್ಲದೇ ವಿಶ್ವಕೋಶಗಳು, ಸಾಮಾಜಿಕಕೋಶಗಳೂ(ಥೆಸ್ಸಾರಸ್) ವಿಶೇಷವಾದ ಸಂದರ್ಭಗಳಲ್ಲಿ ಪ್ರಯೋಜನಕ್ಕೆ ಬರುತ್ತವೆ.

ಹೀಗೆ ವ್ಯಾಖ್ಯಾನದ ಮೊದಲಮೆಟ್ಟಲು ಪದ್ಯಗಳನ್ನು ಅರ್ಥಮಾಡಿಕೊಳ್ಳುವುದೇ ಆಗಿರುತ್ತದೆ. ನಂತರ ಅನುಭವ, ಮಾತಿನ ನಯ-ನವಿರು, ಕಾವ್ಯಗಳನ್ನು ಮತ್ತೆ-ಮತ್ತೆ ಓದಿದಾಗ ದೊರಕುವ ಹೊಸಹೊಳಹುಗಳು ಎಲ್ಲವನ್ನೂ ಸೂಕ್ತವಾಗಿ ವ್ಯಾಖ್ಯಾನದಲ್ಲಿ ಹಿತ-ಮಿತವಾಗಿ ಜೋಡಿಸಿಕೊಂಡಾಗ ವ್ಯಾಖ್ಯಾನವೂ ಕಲೆಯ ಮಟ್ಟವನ್ನು ಮುಟ್ಟಬಹುದು.

******

## ಜಿಲ್ಲಾ ವರದಿಗಳು

### ಕಲ್ಬುರ್ಗಿ ಜಿಲ್ಲಾ ವರದಿ

ದಿನಾಂಕ : 3.2.2018 ರಂದು ಗಮಕಕಲಾ ಪರಿಷತ್ತಿನ ಕಲ್ಬುರ್ಗಿ ಜಿಲ್ಲಾ ಘಟಕದ ವತಿಯಿಂದ ಕಲ್ಬುರ್ಗಿಯ ವಿದ್ಯಾನಿಕೇತನ ಪ್ರೌಢಶಾಲೆಯಲ್ಲಿ ಗಮಕ ವಾಚನ–ವ್ಯಾಖ್ಯಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. 8, 9 ಹಾಗೂ 10ನೇ ತರಗತಿಯ ಕನ್ನಡ ಪಠ್ಯಭಾಗದಲ್ಲಿರುವ ಕಾವ್ಯಗಳ ವಾಚನ ಹಾಗೂ ವ್ಯಾಖ್ಯಾನವನ್ನು ಹಾಸನ ಜಿಲ್ಲಾ ಗಮಕ ಕಲಾ ಪರಿಷತ್ತಿನ ಅಧ್ಯಕ್ಷರಾದ ಕಲಾಶ್ರೀ ಗಣೇಶ ಉಡುಪ ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ಶಾಲೆಯ ಮುಖ್ಯಗುರುಗಳು, ಸಾಹಿತಿ ಪ್ರೊ. ವಸಂತ ಕುಷ್ಟಗಿಯವರು, ಕಲ್ಬುರ್ಗಿ ಜಿಲ್ಲಾ ಪ್ರತಿನಿಧಿ ಡಾ॥ ಸವಿತಾ ಸಿರಗೋಜಿಯವರು, ಸಂಗೀತ ವಿದ್ವಾಂಸರು, 150ಕ್ಕೂ ಅಧಿಕ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ದಿನಾಂಕ: 3.2.2018 ರಂದು ಕಲ್ಬುರ್ಗಿಯ ಮುರಳೀಧರ್ ಹೆರೂರು ಅವರು ನಡೆಸುತ್ತಿರುವ ದತ್ತಾತ್ತೇಯ ಪ್ರೌಢಶಾಲೆಯಲ್ಲಿ 9 ಹಾಗೂ 10ನೇ ತರಗತಿಯ ಕನ್ನಡ ಕಾವ್ಯಗಳ ವಾಚನ ಮತ್ತು ವ್ಯಾಖ್ಯಾನವನ್ನು ಹಾಸನ ಜಿಲ್ಲಾ ಗಮಕಕಲಾ ಪರಿಷತ್ತಿನ ಅಧ್ಯಕ್ಷರಾದ ಕಲಾಶ್ರೀ ಗಣೇಶ ಉಡುಪ ಅವರು ನೀಡಿದರು. ಈ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಮಾತನಾಡಿದ ಡಾ॥ ಸುರೇಶ್‌ರವರು ಇಂತಹ ಕಾರ್ಯಕ್ರಮಗಳು ಇನ್ನೂ ಹೆಚ್ಚು ಹೆಚ್ಚು ನಡೆಯಬೇಕು ಎಂದು ಆಶಿಸಿದರು. ಕನಕದಾಸರ ರಾಮಧ್ಯಾನಚರಿತೆ, ಕುಮಾರವ್ಯಾಸನ ಗದುಗಿನ ಭಾರತದ ಕಾವ್ಯಭಾಗಗಳನ್ನು ಹಾಗೂ ಭಾವಗೀತೆಗಳನ್ನು ವಿದ್ಯಾರ್ಥಿಗಳಿಗೆ ಮನದಟ್ಟಾಗುವಂತೆ ವಾಚನ–ವ್ಯಾಖ್ಯಾನದೊಂದಿಗೆ ವಿವರಿಸಿದರು.

ಶಾಲೆಯ ಮುಖ್ಯಗುರುಗಳು, 150 ವಿದ್ಯಾರ್ಥಿಗಳು, ಸಹಶಿಕ್ಷಕರು, ಸಂಗೀತ ವಿದ್ವಾಂಸರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಡಾ.ಸವಿತಾ ಸಿರಗೋಜಿಯವರು ಪ್ರಾಸ್ತಾವಿಕ ನುಡಿಯಲ್ಲಿ ಗಮಕ ಬೆಳೆದು ಬಂದ ಬಗೆಯನ್ನು ವಿವರಿಸಿದರು. ಡಾ. ವಸಂತ ಕುಷ್ಠಗಿ ಹಿರಿಯ ಸಾಹಿತಿಗಳು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಕಮಲನಾಭ ಓಂಕಾರ ಶಿಕ್ಷಕರು ಕಾರ್ಯಕ್ರಮವನ್ನು ನಿರೂಪಿಸಿದರು.

### ಮಂಡ್ಯ ಜಿಲ್ಲಾ ವರದಿ

ದಿನಾಂಕ: 3.3.2018 ರಂದು ಮಂಡ್ಯಜಿಲ್ಲೆಯ ಕೆ.ಆರ್.ಪೇಟೆ ಪದವಿ ಕಾಲೇಜಿನಲ್ಲಿ ಬೆಂಗಳೂರಿನ ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಪೀಠದ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಹಾಸನದ ಶ್ರೀಮತಿ ಗೀತಾ ಸೀತಾರಾಮ ಭಟ್ ಅವರು ಕನಕದಾಸ ವಿರಚಿತ "ರಾಮಧಾನ್ಯ ಚರಿತೆ" ಮೋಹನ ತರಂಗಿಣಿ ಹಾಗೂ ಹರಿಭಕ್ತಿ ಸಾರದ ಕಾವ್ಯಭಾಗಗಳನ್ನು ಗಾಯನ ಮಾಡಿದರೆ, ಹಾಸನ ಜಿಲ್ಲಾ ಗಮಕಕಲಾ ಪರಿಷತ್ತಿನ ಕಾರ್ಯದರ್ಶಿ ಗಮಕ ವಿದುಷಿ ಶ್ರೀಮತಿ ರುಕ್ಮಿಣಿ ನಾಗೇಂದ್ರ ವ್ಯಾಖ್ಯಾನ ನೀಡಿದರು. ಕನಕದಾಸ ಅಧ್ಯಯನ ಪೀಠದ ಮುಖ್ಯಸ್ಥರಾದ ಶ್ರೀ ಕಾ.ತ. ಚಿಕ್ಕಣ್ಣರವರು ಕಾಲೇಜಿನ ಪ್ರಾಚಾರ್ಯರು ಹಾಗೂ ಪ್ರಾಧ್ಯಾಪಕರು, ಸುಮಾರು 400ಕ್ಕೂ ಅಧಿಕ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

### ಹಾಸನ ಜಿಲ್ಲಾ ವರದಿ

ದಿನಾಂಕ: 5.3.2018 ರಂದು ಹಾಸನದ ಕುವೆಂಪುನಗರದಲ್ಲಿರುವ ಶ್ರೀಮತಿ ಸೀತಾಲಕ್ಷ್ಮಿ ಹಾಗೂ ಶ್ರೀ ಸತ್ಯಮೂರ್ತಿ ಅವರ ಮನೆಯಲ್ಲಿ ನಡೆದ ಗಮಕ ವಾಚನ–ವ್ಯಾಖ್ಯಾನ ಕಾರ್ಯಕ್ರಮದಲ್ಲಿ ಕಲಾಶ್ರೀ ಗಣೇಶ ಉಡುಪ ಅವರು ವಾಲ್ಮೀಕಿ ರಾಮಾಯಣದಿಂದ "ಶ್ರೀ ರಾಮಪಾದುಕಾ ಪಟ್ಟಾಭಿಷೇಕ"ದ ಭಾಗವನ್ನು ವಾಚನ ಮಾಡಿದರೆ, ಕರ್ನಾಟಕ ಗಮಕಕಲಾ ಪರಿಷತ್ತಿನ ಗೌ॥ ಕಾರ್ಯದರ್ಶಿಗಳಾದ ಶ್ರೀಮತಿ ಶಾಂತಾಗೋಪಾಲ್ ಅವರು ವಿದ್ವತ್‌ಪೂರ್ಣ ವ್ಯಾಖ್ಯಾನ ನೀಡಿದರು. ಶೃಂಗೇರಿ ಶ್ರೀ ಶಂಕರಮಠದ ಹಾಸನ ಶಾಖೆಯ ಧರ್ಮಾಧಿಕಾರಿಗಳಾದ ಶ್ರೀ ಎಂ.ಎಂ. ಶ್ರೀಕಂಠಯ್ಯನವರು ಉಪಸ್ಥಿತರಿದ್ದು ಕಾರ್ಯಕ್ರಮದ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿದರು. ಮೈಸೂರಿನ ಸಾಹಿತಿ ಬಿ.ಪಿ. ಅಶ್ವತ್ಥನಾರಾಯಣ ಅವರು ಸ್ವಾಗತಿಸಿದರೆ, ಶ್ರೀಮತಿ ಸೀತಾಲಕ್ಷ್ಮಿಯವರು ವಂದಿಸಿದರು. ಹಾಸನವಾಣಿ ಸಂಪಾದಕಿ, ಲೇಖಕಿ ಶ್ರೀಮತಿ ಲೀಲಾವತಿಯವರು, ಬೆಂಗಳೂರಿನ ಡಾ॥ ಗೋಪಾಲಕೃಷ್ಣರವರ ಕುಟುಂಬದವರು ಹಾಗೂ ಮಹಿಳಾ ಸಂಘದ ಸದಸ್ಯೆಯರು, ಇನ್ನಿತರರು ಉಪಸ್ಥಿತರಿದ್ದರು.

ದಿನಾಂಕ: 5–3–18 ರಂದು ಹಾಸನ ಜಿಲ್ಲೆ ಹೊಳೆನಸೀಪುರದ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನಕದಾಸ ಅಧ್ಯಯನಪೀಠ ಬೆಂಗಳೂರು ಇವರ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಕನಕದಾಸ ವಿರಚಿತ ರಾಮಧ್ಯಾನ

ಚರಿತೆ, ನಳಚರಿತ್ರೆಯ ಕಾವ್ಯಭಾಗಗಳನ್ನು ಮೈಸೂರಿನ ಗಮಕ ವಿದುಷಿ ಶ್ರೀಮತಿ ಸತ್ಯಲಕ್ಷ್ಮಿ ಪದ್ಮೇಶರವರು ವಾಚನ ಮಾಡಿದರೆ, ಹಾಸನದ ವಿದ್ವಾನ್ ಪರಮೇಶ್ವರ ವಿ. ಭಟ್ ಅವರು ವ್ಯಾಖ್ಯಾನ ನೀಡಿದರು. ಅಧ್ಯಯನ ಪೀಠದ ಮುಖ್ಯಸ್ಥರಾದ ಕಾ.ತ. ಚಿಕ್ಕಣ್ಣರವರು, ಕಾಲೇಜಿನ ಸಿಬ್ಬಂದಿಯವರು ಹಾಗೂ 300ಕ್ಕೂ ಅಧಿಕ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ದಿನಾಂಕ: 20.3.18 ರಂದು ಅರಕಲಗೂಡಿನ ರಾಮೇಶ್ವರ ದೇವಾಲಯದಲ್ಲಿ ರಾಮೋತ್ಸವದ ಪ್ರಯುಕ್ತ ಗಮಕ ಕಾರ್ಯಕ್ರಮದಲ್ಲಿ ಹಾಸನ ಜಿಲ್ಲಾ ಗಮಕಕಲಾ ಪರಿಷತ್ತಿನ ಅಧ್ಯಕ್ಷರಾದ ಕಲಾಶ್ರೀ ಗಣೇಶ ಉಡುಪ ಅವರು ರಾಷ್ಟ್ರಕವಿ ಕುವೆಂಪು ವಿರಚಿತ ಶ್ರೀ ರಾಮಾಯಣ ದರ್ಶನಂ ಕಾವ್ಯದಿಂದ 'ಪಾದುಕಾ ಕಿರೀಟ' ಭಾಗವನ್ನು ವಾಚನ ಮಾಡಿದರೆ, ವಿದ್ವಾನ್ ಪರಮೇಶ್ವರ ವಿ. ಭಟ್ ಅವರು ವ್ಯಾಖ್ಯಾನ ನೀಡಿದರು. ಪತ್ರಕರ್ತ ಅರಕಲಗೂಡು ಸುಬ್ಬರಾವ್, ಗಣೇಶಮೂರ್ತಿ, ವಿಶ್ವನಾಥ್, ವಿದುಷಿ ಶ್ರೀಮತಿ ನಾಗಮಣಿ, ವೆಂಕಟೇಶಮೂರ್ತಿ, ಶೇಷಾಚಲಮೂರ್ತಿ, ಮುಂತಾದವರು ಉಪಸ್ಥಿತರಿದ್ದರು.

ಬೇಲೂರಿನ ಸೌಮ್ಯಶ್ರೀ ಗಮಕ ಕಲಾ ಶಾಲಾ ವತಿಯಿಂದ ನಡೆಸುತ್ತಿರುವ ಮನೆ–ಮನೆ ಗಮಕ ಹಬ್ಬ ಕಾರ್ಯಕ್ರಮದಲ್ಲಿ ಫೆಬ್ರವರಿ ತಿಂಗಳಿನಲ್ಲಿ ಶ್ರೀಮತಿ ನವರತ್ನ ಎಸ್. ವಟಿ ಅವರ ವಾಚನಕ್ಕೆ ಡಾ॥ ಶ್ರೀವತ್ಸ ಎಸ್. ವಟಿಯವರು ವ್ಯಾಖ್ಯಾನವನ್ನು ನೀಡಿದರು. ಮಾರ್ಚ್ ತಿಂಗಳ ಕಾರ್ಯಕ್ರಮದಲ್ಲಿ ಶ್ರೀಮತಿ ಮಾಲತಿ ಪ್ರಶಾಂತ್ ಅವರ ವಾಚನಕ್ಕೆ ಶ್ರೀಮತಿ ನವರತ್ನ ಎಸ್. ವಟಿಯವರು ವ್ಯಾಖ್ಯಾನವನ್ನು ನೀಡಿದರು.

ಬೇಲೂರಿನ ಶಂಕರಮಠದಲ್ಲಿ ಶ್ರೀ ಶಂಕರ ಜಯಂತಿ ಅಂಗವಾಗಿ ನಡೆದ ಶಂಕರ ಸಪ್ತಾಹದಲ್ಲಿ ಮೊದಲ ದಿನದಂದೇ ಶಂಕರಾಚಾರ್ಯ ವಿರಚಿತ ವಿವೇಕ ಚೂಡಾಮಣಿ ಕಾವ್ಯದ ಆಯ್ದ ಭಾಗವನ್ನು ಶ್ರೀಯುತ ಹೆಚ್.ಎ. ಶ್ರೀನಾಥ್ ಅವರು ಶ್ರೀಸಾಮಾನ್ಯನಿಗೂ ಅರ್ಥವಾಗುವಂತೆ ಸರಳವಾಗಿ ಮತ್ತು ಸುಶ್ರಾವ್ಯವಾಗಿ ವಾಚಿಸಿದರು. ಶ್ರೀಯುತ ಕೆ. ಆರ್. ಮಂಜುನಾಥ್ ಅವರು ವ್ಯಾಖ್ಯಾನವನ್ನು ವಿದ್ವತ್ ಪೂರ್ಣವಾಗಿ ನೆರವೇರಿಸಿ ಕೊಟ್ಟರು.

## ತುಮಕೂರು ಜಿಲ್ಲಾ ವರದಿ

ದಿ:3–02–2018 ಶಿವಮೂಕಾಂಬಿಕಾ ನಗರದ ದತ್ತಿ ನೀಡಿದ ನಾಗರೀಕರು, ಗಮಕ ಪರಿಷತ್ತಿನ ವತಿಯಿಂದ ವ್ಯವಸ್ಥೆ ಮಾಡಿದ್ದ ಗಮಕ ದತ್ತಿ ನೀಡಿದ ನಾಗರೀಕರು, ಗಮಕ ಪರಿಷತ್ತಿನ ವತಿಯಿಂದ ವ್ಯವಸ್ಥೆ ಮಾಡಿದ್ದ ಗಮಕ ದತ್ತಿ ನಿಧಿ ಕಾರ್ಯಕ್ರಮ ಶಿವ ಮೂಕಾಂಬಿಕಾ ದೇವಸ್ಥಾನದಲ್ಲಿ ಶ್ರೀಮತಿ ಸತ್ಯವತಿ ಜಯರಾಂರವರು "ತುರಂಗ ಭಾರತ"ದ ಭವನ ಭಿಕ್ಷಾಟಣೆ ಕಾವ್ಯಕಥಾ ಪ್ರಸಂಗವನ್ನು ವಾಚನ ಮತ್ತು ವ್ಯಾಖ್ಯಾನ ಮುಖೇನ ಶ್ರೋತೃಗಳನ್ನು ರಂಜಿಸಿದರು.

ಇದಲ್ಲದೇ ಅಕ್ಟೋಬರ್ 2017 ರಿಂದ ಜನವರಿ 2018 ರವರೆಗೂ ವಿವಿಧ ಬಡಾವಣೆಗಳಲ್ಲಿ ಮತ್ತು ದೇವಸ್ಥಾನಗಳಲ್ಲಿ ಮನೆ–ಮನೆ ಗಮಕ ಪ್ರಚಾರ ಕಾರ್ಯಕ್ರಮವು ಸ್ಥಳೀಯ ಕಲಾವಿದರಿಂದ ಸುಮಾರು 22 ಕಾರ್ಯಕ್ರಮಗಳನ್ನು ನಡೆಸಲಾಯಿತು.

## ಕೊಪ್ಪಳ ಜಿಲ್ಲಾ ವರದಿ

ತಳಕಲ್ಲ ಗ್ರಾಮದಲ್ಲಿ ಸರಕಾರಿ ಪದವಿ ಪೂರ್ವಕಾಲೇಜಿನಲ್ಲಿ ಕರ್ನಾಟಕ ಇತಿಹಾಸ ಅಕಾಡಮಿ (ರಿ) ಬೆಂಗಳೂರು ಮತ್ತು ಕರ್ನಾಟಕ ಗಮಕ ಕಲಾ ಪರಿಷತ್ತು ಕೊಪ್ಪಳ ಜಿಲ್ಲೆ ಇವರ ಸಂಯುಕ್ತ ಆಶ್ರಯದಲ್ಲಿ ಸ್ವಾಮಿ ವಿವೇಕಾನಂದರ 156 ನೇ ಜನ್ಮ ದಿನಾಚರಣೆಯ ರಾಷ್ಟ್ರೀಯ ಯುವ ದಿನ ಮತ್ತು ಮಹಾಜ್ಞಾನಿ ವೇಮನ ಅವರ ದಿನಾಚರಣೆಯನ್ನು ನಡೆಸಲಾಯಿತು. ಇದರ ನಿಮಿತ್ತ ಐತಿಹಾಸಿಕ ಪರಂಪರೆ ಉಳಿಸಿ ಕುರಿತು ಪ್ರೊ. ಪರಶುರಾಮ ಕೆ.ಕೊಂಕತಿರವರು ಉಪನ್ಯಾಸ ನೀಡಿದರು. ಹೊಸ ಇತಿಹಾಸ ಸೃಷ್ಟಿಸುವವರಿಗೆ ಪರಂಪರೆಯ ಅವಲೋಕನ ಹೆದ್ದಾರಿಯೆಂದು ಅಭಿಪ್ರಾಯಪಟ್ಟರು.

"ವಿದ್ಯಾರ್ಥಿಗಳಿಗೆ ಸ್ವಾಮಿ ವಿವೇಕಾನಂದರ ಸಂದೇಶಗಳು" ಎಂಬ ವಿಷಯ ಕುರಿತು ಡಾ. ಫಕೀರಪ್ಪ ವಜ್ರಬಂಡಿ ಅವರು ಉಪನ್ಯಾಸ ನೀಡುತ್ತಾ ವಿದ್ಯಾರ್ಥಿಗೆ ತನ್ನ ಮುಂದಿನ ಭವಿಷ್ಯ ಬದುಕಿನ ಜ್ಞಾನ ಗಳಿಕೆ ಎಷ್ಟು ಮುಖ್ಯವೋ ಅಷ್ಟೇ ರಾಷ್ಟ್ರಭಿಮಾನದ ತಿಳಿವಳಿಕೆ ಮುಖ್ಯ. ಹೆತ್ತತಾಯಿ ಹೆತ್ತ ಭೂಮಿ, ನೆತ್ತಿಯುಳ್ಳವನಿಗೆ ತನ್ನ ಪ್ರಾಣಕ್ಕೂ ಮಿಗಿಲೆಂದೂ ವಿವೇಕಾನಂದರು ನಂಬಿದ್ದರು. ಕಾರಣ ಚಿಕಾಗೋದ ಧರ್ಮ ಸಮ್ಮೇಳನದ ನುಡಿಗಳು ಭಾರತವನ್ನು ಜಗತ್ತು ನಿಬ್ಬೆರಗಾಗುವಂತೆ ಮಾಡಿದರು. ಇಂಥ ಆದರ್ಶ ಗುಣಗಳನ್ನು ವಿದ್ಯಾರ್ಥಿ ಜೀವನದಲ್ಲಿ ಬೆಳೆಸಿಕೊಳ್ಳವಂತೆ ಕಿವಿಮಾತು ಹೇಳಿದರು.

ಇದೇ ಸಂದರ್ಭದಲ್ಲಿ "ಶೈಕ್ಷಣಿಕ ಪ್ರವಾಸ : ನನ್ನ ಅನುಭವ" ಕುರಿತು ನಡೆಸಿದ ಪ್ರಬಂಧ ಸ್ಪರ್ಧೆಯಲ್ಲಿ ಆಯ್ಕೆಯಾದ 15 ವಿದ್ಯಾರ್ಥಿಗಳಿಗೆ ಪುಸ್ತಕ ಬಹುಮಾನ ನೀಡಿ ಪ್ರೋತ್ಸಾಹಿಸಲಾಯಿತು. ವೀರಭದ್ರಯ್ಯ ಲಕಮಾಪುರ

ಕಾರ್ಯಕ್ರಮ ಉದ್ಘಾಟಿಸಿದರು. ಪ್ರಾಚಾರ್ಯರಾದ ಶ್ರೀ ವಿ.ವಿ. ಗಂಗಣ್ಣನವರು ಅಧ್ಯಕ್ಷತೆ ವಹಿಸಿದ್ದರು. ಶೇಖರಪ್ಪ ದೊಡ್ಡಮನಿ, ನಿಂಗಪ್ಪ ಕೆಂಚರೆಡ್ಡಿ, ಶ್ರೀಮತಿ ಗಿರಿಜಾ ಕನ್ನಾರಿ ಮತ್ತು ಬೀರಪ್ಪ ಬಿಸನಹಳ್ಳಿ ಅತಿಥಿಗಳಾಗಿ ಭಾಗವಹಿಸಿದ್ದರು. ಆರಂಭದಲ್ಲಿ ಮಂಜುಳಾ ಮತ್ತು ಸಂಗಡಿಗರು ಪ್ರಾರ್ಥನೆ ಗೀತೆ ಹಾಡಿದರು. ಭೀಮವ್ವ ಎಸ್.ಕೆ ಸ್ವಾಗತಿಸಿದರು, ವಾಣಿಶ್ರೀ ವಂದಿಸಿದರು.ಈ ಕಾರ್ಯಕ್ರಮವನ್ನು ನೇತ್ರಾವತಿ ಕಡಿಮನೆ ನಿರೂಪಣೆ ಮಾಡಿದರು.

### ಫಲಿತಾಂಶ ಸುಧಾರಣಾ ಕಾರ್ಯಾಗಾರ

ಕೊಪ್ಪಳ ತಾಲೂಕಿನ ಭಾಗ್ಯ ನಗರದ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದಲ್ಲಿ ಕರ್ನಾಟಕ ಗಮಕ ಕಲಾ ಪರಿಷತ್ತಿನ ವತಿಯಿಂದ ಇತ್ತೀಚೆಗೆ 10ನೇ ತರಗತಿ ವಿದ್ಯಾರ್ಥಿಗಳಿಗೆ ವಾರ್ಷಿಕ ಫಲಿತಾಂಶ ಸುಧಾರಣಾ ಕಾರ್ಯಗಾರ ಆಯೋಜಿಸಲಾಗಿತ್ತು. ಗಮಕ ಕಲಾ ಪರಿಷತ್ತು ಜಿಲ್ಲಾಧ್ಯಕ್ಷ ಫಕೀರಪ್ಪ ವಜ್ರಭಂಡಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಶಿಕ್ಷಕಿ ಶ್ರೀ ದೇವಿ ಪುರೋಹಿತ, ಜಿ.ಎಸ್.ಗೋನಾಳ, ಎ.ಪಿ.ಅಂಗಡಿ, ಹಿರಿಯರಾದ ವೀರಣ್ಣ ವಾಲಿ, ಸುಜಾತ ಜಟ್ಟರ, ಸೋಮಶೇಖರ ಹರ್ತಿ, ಗಿರೀಶ ಪಾನಘಂಟಿ, ಶಿವಕುಮಾರ ಹಿರೇಮಠ ಇತರರು ಇದ್ದರು. ಭಾವನಾ ಪ್ರಾರ್ಥಿಸಿದರು. ಮೆಹಬೂಬ್ ಎಂ.ನಿರೂಪಿಸಿದರು. ಗಮಕ ಕಲಾ ಪರಿಷತ್ತಿನ ಅಧ್ಯಕ್ಷ ಶ್ರೀನಿವಾಸ ಚಿತ್ರಗಾರ ವಂದಿಸಿದರು.

### ಪದಾಧಿಕಾರಿಗಳ ನೇಮಕ

ಕೊಪ್ಪಳ ನಗರದ ಪ್ರವಾಸಿ ಮಂದಿರದಲ್ಲಿಕರ್ನಾಟಕ ಗಮಕ ಕಲಾ ಪರಿಷತ್ತಿನಿಂದ ನಡೆದ ತಾಲೂಕು ಘಟಕದ ಸಭೆಯಲ್ಲಿ ಕೊಪ್ಪಳ ತಾ.ಘಟಕಕ್ಕೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ತಾಲೂಕು ಅಧ್ಯಕ್ಷ ರಾಗಿ ಶ್ರೀನಿವಾಸ ಚಿತ್ರಗಾರ, ಗೌರವಾಧ್ಯಕ್ಷರಾಗಿ ಮೈಲಾರಗೌಡ ಹೊಸಮನಿ, ಉಪಾಧ್ಯಕ್ಷರಾಗಿ ಎ.ಪಿ.ಅಂಗಡಿ, ಹಾಗೂ ಹೇಮಲತಾ ಬೊಮ್ಮನಾಳ, ಪ್ರಧಾನ ಕಾರ್ಯದರ್ಶಿಯಾಗಿ ಮಹಿಬೂಬ್ ಎಂ, ಕೋಶಾಧ್ಯಕ್ಷರಾಗಿ ಬಸಪ್ಪ ದೇಸಾಯಿ, ಸಂಘಟನೆ ಕಾರ್ಯದರ್ಶಿಗಳಾಗಿ ಬಸಪ್ಪ ದೇಸಾಯಿ, ಸಂಘಟನೆ ಕಾರ್ಯದರ್ಶಿಯಾಗಿ ಮಂಜುನಾಥ ಚಿತ್ರಗಾರ, ಪೂರ್ಣಿಮಾ ಶೆಟ್ಟರ, ಮೈಲಾರಪ್ಪ ಉಂಕಿ ಹಾಗೂ ನಿಂಗಮ್ಮ ಪಟ್ಟಣಶೆಟ್ಟಿ, ಸಹ ಕಾರ್ಯದರ್ಶಿಗಳಾಗಿ ಪ್ರಭಾಕರ ದಾಸರ, ರಾಕೇಶ ಕಾಂಬ್ಳೇಕರ, ಮಹೇಶ ಸರದಿ, ಹಾಗೂ ಅಣ್ಣಪ್ಪ ಹಳ್ಳಿ ಕಾರ್ಯದರ್ಶಿ ಸಮಿತಿ ಸದಸ್ಯರಾಗಿ ಸೋಮ ಶಪತ್ತರ, ಶಿವಾನಂದ ಬಡಿಗೇರ, ಶ್ರೀಕಾಂತ ಮಟ್ಟಿ, ಯಮನೂರಪ್ಪ ಭಜಂತ್ರಿ, ಮೋತೆಪ್ಪ ಪೂಜಾರ, ಅಲಿ ಕೆ.ಎಂ, ಅಂಜನಾದೇವಿ ಕಲ್ಲೂರ್ಕರ, ಬಸವರಾಜ ಮರದೂರ, ಮಾಧ್ಯಮ ಪ್ರತಿನಿಧಿಗಳನ್ನಾಗಿ ಶಿವಕುಮಾರ ಹಿರೇಮಠ, ಉಮೇಶ ಪೂಜಾರ. ಗೌರವಾನ್ವಿತ ಮಾರ್ಗದರ್ಶಕರನ್ನಾಗಿ ಜಿ.ಎಸ್ ಗೋನಾಳ, ಶಂಭುಲಿಂಗಪ್ಪ ಹರಗೇರಿ, ಅಕ್ಬರ್ ಕಾಲಿಮಿರ್ಚಿ, ಸಿದ್ದಲಿಂಗಪ್ಪ ಕೊಟ್ನೆಕಲ್, ಅಂದಾನಗೌಡ ಪೊಲೀಸ ಪಾಟೀಲ, ಶವಪ್ಪ ಜೋಗಿ, ಶಿವಾನಂದ ಹೊದ್ಲೂರ ಅವರನ್ನು ನೇಮಕ ಮಾಡಲಾಯಿತು ಎಂದು ಘಟಕದ ಅಧ್ಯಕ್ಷ ಶ್ರೀನಿವಾಸ ಚಿತ್ರಗಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬೆಂಗಳೂರು ಜಿಲ್ಲಾ ವರದಿ

ಬೆಂಗಳೂರಿನಲ್ಲಿ ಎಸ್.ಎಸ್. ಎಂ. ಆರ್.ವಿ. ಪದವಿ ಕಾಲೇಜಿನ ಕನ್ನಡ ವಿಭಾಗ ಮತ್ತು ಶಿವಾನಂದ ಲಾಸ್ಯ ಲಹರಿ ಹಾಗೂ ಕರ್ನಾಟಕ ಗಮಕ ಕಲಾ ಪರಿಷತ್ತು ಇದರ ಸಹಯೋಗದಲ್ಲಿ ಯುವ ಅಂತರ ಕಾಲೇಜು ಸ್ಪರ್ಧೆ ಗಮಕ ಗಾಂಭೀರ್ಯ ಕಾರ್ಯಕ್ರಮ ನೆರವೇರಿತು. ಅಧ್ಯಕ್ಷತೆಯನ್ನು ಆರ್.ಎಸ್.ಎಸ್.ಟಿ. ಟ್ರಸ್ಟಿಯಾದ ಶ್ರೀಪತಿ ಎ. ಶ್ರೀಧರ್, ಮುಖ್ಯ ಅತಿಥಿಗಳಾಗಿ ಗಮಕ ಕಲಾ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಕರ್ನಾಟಕ ಕಲಾಶ್ರೀ ಎಂ.ಆರ್. ಸತ್ಯನಾರಾಯಣ್, ಗೌರವ ಅತಿಥಿ ಮತ್ತು ಸನ್ಮಾನಿತರಾಗಿ ಹಿರಿಯ ಗಮಕಿಗಳಾದ ಶ್ರೀಮತಿ ಹೈಮಾವತಮ್ಮ ಮತ್ತು ಶ್ರೀ ಜಯರಾಮರಾವ್ ಅವರು ಉಪಸ್ಥಿತರಿದ್ದರು. ಗಮಕ ವಾಚನವನ್ನು ಶ್ರೀ ಎಂ. ಆರ್. ಕೇಶವಮೂರ್ತಿಯವರು ಗಮಕ ವ್ಯಾಖ್ಯಾನವನ್ನು ಪ್ರಖ್ಯಾತ ಗಮಕ ವ್ಯಾಖ್ಯಾನಕಾರರಾದ ಡಾ. ಎ.ವಿ. ಪ್ರಸನ್ನ ಅವರು ನೆರವೇರಿಸಿಕೊಟ್ಟರು.

## ವಿಜಯಪುರ ಜಿಲ್ಲಾ ವರದಿ

ದಿ:23–02–18ರಂದು ಜಿಲ್ಲಾ ಗಮಕ ಕಲಾ ಪರಿಷತ್ತು ವಿಜಯಪುರರವರ ವತಿಯಿಂದ ದತ್ತಿ ಗಮಕ ವಾಚನ ವ್ಯಾಖ್ಯಾನ ಕಾರ್ಯಕ್ರಮಗಳನ್ನು ಆಯೋಜಿಸಿದ್ದರು. ನಮ್ಮ ದೇಶದ ಸಂಸ್ಕೃತಿಯನ್ನು ರಾಮಯಣ ಮಹಾಭಾರತದ ಸುಂದರ ಕಥೆಗಳಿಂದ ತಿಳಿದುಕೊಳ್ಳಲು ದಾರಿದೀಪವಾಗಿದೆ. ರಾಮಯಣ ಕಥೆಗಳು ಶಾಲಾ ಮಕ್ಕಳಿಗೆ ಓದಲು ಪ್ರೇರೇಪಿಸಬೇಕು. ಮಕ್ಕಳು ನೈತಿಕತೆದಿಂದ ಭವಿಷ್ಯತ್ತನ್ನು ನಿರ್ಮಿಸಿಕೊಳ್ಳಲು ಸಾಧ್ಯವೆಂದು ಅತಿಥಿಗಳಾದ ಶ್ರೀ ಚೆನ್ನಪ್ಪ ಹೆಗಡೆಯವರು ಹೇಳಿದರು. ಮತ್ತೊಬ್ಬ ಅತಿಥಿಗಳಾದ ಶ್ರೀ ಬಾ.ಇ.ಕುಮಠೆ ಅವರು ಜಿಲ್ಲಾ ಗಮಕ ಕಲಾ ಪರಿಷತ್ತಿನ ನಿರಂತರ ಕಾರ್ಯಚಟುವಟಿಕೆಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ರಾಮಯಣದ ಹತ್ತು ಶ್ಲೋಕಗಳನ್ನು ಗಮಕ ವಾಚಕರಾದ ಶ್ರೀ ವೇಣುಗೋಪಾಲ ವ್ಹಿ. ಕಟ್ಟಿ ಸುಶ್ರಾವ್ಯವಾಗಿ ವಾಚನ-ವ್ಯಾಖ್ಯಾನವನ್ನು ನೆರವೇರಿಸಿದರು. ಶಾಲಾ ಮಕ್ಕಳು ಕುತೂಹಲದಿಂದ ಆಲಿಸಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ಎಲ್.ಪಿ.ಬಿರಾದಾರ ಶಾಲೆ-ಕಾಲೇಜುಗಳಲ್ಲಿ ಇಂದಿನ ಮಕ್ಕಳಿಗೆ ಗಮಕ ಕಲಾ ಕಾರ್ಯಕ್ರಮಗಳಿಂದ ಅತ್ಯಂತ ಉಪಯುಕ್ತವಾಗುತ್ತವೆ ಎಂದು ಜಿಲ್ಲಾಘಟಕದ ಕಾರ್ಯವನ್ನು ಮೆಚ್ಚಿಕೊಂಡರು. ಪ್ರಾರಂಭದಲ್ಲಿ ಗಮಕ ಕಲಾ ಪರಿಷತ್ತಿನ ಪರಿಚಯ ನೀಡುತ್ತ ಎಲ್ಲರ ಸಹಾಯ-ಸಹಕಾರವನ್ನು ಬಯಸಿ ವಚನಗಾಯನ ಮಾಡಿ ಜಿಲ್ಲಾಧ್ಯಕ್ಷ ಬಿ.ಎಂ.ಪಾಟೀಲರವರು ಪ್ರಾಸ್ತಾವಿಕ ನುಡಿಗಳನ್ನು ಹೇಳಿದರು. ಶಿಕ್ಷಕರಾದ ಶ್ರೀ ಅಂಕೇರಿ ಮಠ ಕಾರ್ಯಕ್ರಮ ನಿರೂಪಿಸಿದರು. ಸರ್ವರನ್ನು ಸ್ವಾಗತಿಸಿದ ಶ್ರೀಮತಿ ಬಿರಾದರಾ ಕೊನೆಯಲ್ಲಿ ವಂದನೆ ಸಲ್ಲಿಸಿದರು.

## ರಾಮನಗರ ಜಿಲ್ಲಾ ವರದಿ

ದಿನಾಂಕ 07-03-2018 ರಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ರಾಮನಗರಜಿಲ್ಲೆ ಸಹಯೋಗದೊಂದಿಗೆ ಸಂತ ಶಿಶುನಾಳ ಶರೀಫರ ಜಯಂತೋತ್ಸವ ಜರುಗಿತು. ಸಾಹಿತಿ ಕೂ.ಗಿ.ಗಿರಿಯಪ್ಪ ಶಿಶುನಾಳ ಶರೀಫರನ್ನು ಕುರಿತು ಉಪಾನ್ಯಾಸ ನೀಡುತ್ತಾ ಶರಣರ ನಂತರ ಮಹಾಸಂತನಾಗಿ ಉತ್ತಮ ರೀತಿಯ ತತ್ವಪದಗಳನ್ನು ನೀಡಿದ ಮಾಹಾಂತರೆನಿಸಿಕೊಂಡಿದ್ದಾರೆಂದರು.

ಶ್ರೀಮತಿ ಶ್ರೀದೇವಿ ಕೋಮಾರಿಯವರೊಂದಿಗೆ, ಶ್ರೀಮತಿ ವಿಜಯ ಶಂಕರ್, ಶ್ರೀಮತಿ ಮಂಜುಳಾದೇವಿ, ಶ್ರೀಮತಿ ಉಮಾ ಹೆಗ್ಗಡೆ, ಶ್ರೀಮತಿ ಚಂದ್ರಾವತಿ ಅವರು ಶಿಶುನಾಳ ಶರೀಫರಗೀತೆಗಳನ್ನು ಹಾಡುವುದರ ಮೂಲಕ ಜಯಂತ್ಯುತ್ಸವಕ್ಕೆ ವಿಶೇಷ ಶೋಭೆ ನೀಡಿದರು. ಸ್ವಾಮಿ ಸ್ವಾಗತಿಸಿದರು, ಶ್ರೀ ಲಕ್ಷ್ಮೀಕಾಂತ್ ವಂದಿಸಿದರು.

## ಶಿವಶರಣೆ ಅಕ್ಕಮಹಾದೇವಿ ಜಯಂತೋತ್ಸವ

ದಿನಾಂಕ 31-3-2018 ರಂದು ಸತ್ಯನಾರಾಯಣ ಕಲ್ಯಾಣ ಮಂಟಪದಲ್ಲಿ ಕರ್ನಾಟಕ ಗಮಕ ಪರಿಷತ್ತಿನ ರಾಮನಗರ ಜಿಲ್ಲಾಘಟಕ ವತಿಯಿಂದ ಅಕ್ಕಮಾಹಾದೇವಿಯವರನ್ನು ಡಾ. ಪ್ರದೀಪ್‌ಕುಮಾರ್ ಹೆಬ್ರಿ ವಿರಚಿತ "ಉಡುತಡಿಯ ಕಿಡಿ" ಮಾಹಾಕಾವ್ಯದ ಕಾವ್ಯವಾಚನವನ್ನು ಗಮಕಿ ಶ್ರೀಮತಿ ವಿಜಯಶಂಕರ್ ಮತ್ತು ಶ್ರೀಮತಿ ಆರ್.ಪಿ.ಶೋಭಾ ಅವರು ವಾಚನ ಮಾಡಿದರು.

ಜಿಲ್ಲಾಧ್ಯಕ್ಷ ಎಲ್ಲೇಗೌಡ ಬೆಸಗರಹಳ್ಳಿ ಪ್ರಾಸ್ತಾವಿಕ ನುಡಿಯನ್ನಾಡುತ್ತಾ ಕನ್ನಡದ ಪ್ರಥಮ ಕವಿಯತ್ರಿಯನ್ನು ಕುರಿತ "ಉಡುತಡಿಯ ಕಿಡಿ"ಯನ್ನು ಪರಿಚಯಿಸುವುದರೊಂದಿಗೆ ಅಕ್ಕಮಹಾದೇವಿಯ ವಚನಗಳು ಎಂದೆಂದಿಗೂ ಪ್ರಸ್ತುತವೆಂದರು. ಶ್ರೀಮತಿ ಸೌಭಾಗ್ಯಮ್ಮ ಮತ್ತು ಎಲ್ಲೇಗೌಡ ಬೆಸಗರಹಳ್ಳಿ ಮಹಾದೇವಿಯಕ್ಕನ ಕೆಲವು ವಚನಗಳನ್ನು ಹಾಡಿದರು. ಶ್ರೀ ನಂಜುಂಡಪ್ಪ ಎಲ್ಲರನ್ನು ಸ್ವಾಗತಿಸಿದರು. ಶ್ರೀ ನಾಗೇಂದ್ರ ಸ್ವಾಮಿಯವರು ವಂದಿಸಿದರು.

ದಿನಾಂಕ 1-4-2018 ರಂದು ಶ್ರೀ ಶ್ರೀ ಶ್ರೀ ಡಾ. ಶಿವಕುಮಾರ ಮಹಾಸ್ವಾಮಿಗಳವರ 111ನೇ ಜಯಂತೋತ್ಸವವು ಕನಕಪುರ ಪೇಟೆ ಬಸವಣ್ಣನ ಗುಡಿಯಲ್ಲಿ ಜರುಗಿತು. ಶ್ರೀ ಶ್ರೀಗಳವರ ಭಾವ ಚಿತ್ರಕ್ಕೆ ಪುಷ್ಪಾರ್ಚನೆಯ ನಂತರ, ಶ್ರೀಶ್ರೀಗಳವರನ್ನು ಕುರಿತು ಪ್ರಕಟಗೊಂಡ ಆರು ಮಹಾಕಾವ್ಯಗಳ ಕರ್ತೃಗಳ ಕಿರುಪರಿಚಯದೊಂದಿಗೆ, ಆಯ್ದ ಪದ್ಯಗಳ ಕಾವ್ಯ ವಾಚನ ಕಾರ್ಯವನ್ನು ಶ್ರೀ ಸಾತನೂರು ಮಹಾದೇವಸ್ವಾಮಿ ಮತ್ತು ಎಲ್ಲೇಗೌಡ ಬೆಸಗರಹಳ್ಳಿ ನೆರವೇರಿಸಿದರು. ಶ್ರೀಮತಿ ಸೌಭಾಗ್ಯಮ್ಮ ತಂಡದವರು ಪ್ರಾರ್ಥನೆ ಮಾಡಿದರು. ಹಾರೋಹಳ್ಳಿ ಅರ್ಬನ್ ಸೊಸೈಟಿ ಕಾರ್ಯದರ್ಶಿಗಳಾದ ಸಿ.ರವೀಂದ್ರ ಸ್ವಾಗತಿಸಿದರು. ಶ್ರೀಮತಿ ಆರ್.ಪಿ.ಶೋಭಾ, ಶ್ರೀ ಸ್ವಾಮಿ ಅವರು ವಚನಗಳು ಮತ್ತು ದೇವರ ನಾಮಗಳು ಹಾಡಿದರು. ಶ್ರೀ ನಿರ್ವಾಣ ಸ್ವಾಮಿ ಹಿರಿಯ ವಿದ್ಯಾರ್ಥಿ ಮತ್ತು ಸಿಬ್ಬಂದಿ ವರ್ಗದ ಸೊಸೈಟಿ ಅಧ್ಯಕ್ಷರಾದ ಬಿ. ಬಸಪ್ಪನವರು ವಂದಿಸಿದರು.

## ಮೈಸೂರು ಜಿಲ್ಲಾ ವರದಿ

ಮೈಸೂರಿನ ಪರಂಪರೆಯ ವತಿಯಿಂದ ಶ್ರೀರಾಮಾಯಣದರ್ಶನಂ ಸಪ್ತಾಹವು ದಿನಾಂಕ:26-02-2018 ರಿಂದ 04-03-2018 ರವರೆಗೆ ಶ್ರೀ ರಾಮಯಣದರ್ಶನಂ ನ ಆಯ್ದ ಭಾಗಗಳ ವಾಚನ-ವ್ಯಾಖ್ಯಾನದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು. ಸ್ವಾತಿ ಡಿ. ನರಸಿಂಹಮೂರ್ತಿ-ನಾರಾಯಣ ದೇಸಾಯಿ,ಲಲಿತಾ ಎಸ್. ಶೇಖರ್-ಕೃ.ಪಾ.ಮಂಜುನಾಥ್, ಮಹಿಮಾ ಕಶ್ಯಪ್-ಶ್ರೀನಿವಾಸ ಫಣಿ, ಪದ್ಮಲತಾ ನಾಗೇಶ್-ಸುಮಾ ರವಿಕಿರಣ್, ದೀಪ್ತಾ ಎನ್.-ಸಂತೋಷ್ ಕೆ.ಎಂ., ಶ್ರದ್ಧಾ ಭಟ್, ಕಾಸರಗೋಡು- ಕೃ.ರಾಮಚಂದ್ರ, ಭಾಗ್ಯಲಕ್ಮೀ-ನಿರಂಜನ್ ಎ. ಇವರುಗಳು ನಡೆಸಿದರು.

ಮೈಸೂರು ಜಿಲ್ಲಾ ಗಮಕ ಕಲಾ ಪರಿಷಷತ್ತಿನ ವತಿಯಿಂದ ಹಿರಿಯ ಗಮಕಿ ಕರ್ನಾಟಕ ಕಲಾಶ್ರೀ ಕೃ. ರಾಮಚಂದ್ರ ಅವರ ನಿವಾಸದಲ್ಲಿ ಪ್ರತಿ ತಿಂಗಳು ನಡೆಸುತ್ತಿರುವ ಪು.ತಿ.ನ. ಅವರ **' ಶ್ರೀಹರಿ ಚರಿತೆ '** ಕಾವ್ಯದ ಗಮಕ ವ್ಯಾಸಂಗ ಗೋಷ್ಠಿಯ 8, 9 ಮತ್ತು 10ನೇ ಉಲ್ಲಾಸವು ಫೆಬ್ರವರಿ, ಮಾರ್ಚ ಮತ್ತು ಏಪ್ರಿಲ್ ತಿಂಗಳಿನಲ್ಲಿ ವಿಶಿಷ್ಟವಾಗಿ, ಅರ್ಥಪೂರ್ಣವಾಗಿ ನೆರವೇರಿತು. ಕಾರ್ಯಕ್ರಮದಲ್ಲಿ ವಿದುಷಿ ಮೀನಾ ನಾಗರಾಜ್, ವಿದುಷಿ ಸತ್ಯಲಕ್ಷ್ಮಿ ಅನಂತ ಪದ್ಮನಾಭ, ಮತ್ತು ವಿದುಷಿ ಶ್ರೀಮತಿ ದಾಕ್ಷಾಯಿಣಿಯವರು ವಾಚನವನ್ನು ನೆರವೇರಿಸಿದರೆ, ಅದಕ್ಕೆ ಕ್ರಮವಾಗಿ ವಿದ್ವಾನ್ ಶ್ರೀ ಫಣಿ ಶ್ರೀನಿವಾಸ್, ವಿದ್ವಾನ್ ಗ.ನಾ. ಭಟ್ ಹಾಗೂ ವಿದ್ವಾನ್ ಕೃ. ಪಾ. ಮಂಜುನಾಥ್ ಅವರು ವ್ಯಾಖ್ಯಾನವನ್ನು ನೀಡಿದರು.

## ಕೊಪ್ಪಳ ಜಿಲ್ಲಾ ವರದಿ

ದಿನಾಂಕ: 24/12/2017 ರವಿವಾರ ಕೊಪ್ಪಳ ಜಿಲ್ಲಾ ಹಾಗೂ ತಾಲೂಕು ಘಟಕಗಳ ಉದ್ಘಾಟನೆ ಮತ್ತು 'ಎಲ್ಲಿತ್ತು ಈ ಮೊದಲು ಎಲ್ಲಿಂದ ಬಂತವ್ವ' ಕೃತಿ ಬಿಡುಗಡೆ ನಡೆಯಿತು. ಪ್ರೊ. ಅಲ್ಲಮಪ್ರಭು ಬೆಟ್ಟದೂರು ಹಿರಿಯ ಸಾಹಿತಿಗಳು ಕಾರ್ಯಕ್ರಮದ ಉದ್ಘಾಟಿಸಿದರು ಹಂಪಿ ಕನ್ನಡ ವಿಶ್ವವಿದ್ಯಾಲಯದ ಭಾಷಾಂತರ ವಿಭಾಗದ ಡಾ. ವಿಠಲರಾವ್ ಟಿ ಗಾಯಕ್ವಾಡ್ ಕೃತಿಯನ್ನು ಬಿಡುಗಡೆ ಮಾಡಿ ಮಾತನಾಡಿದರು. ಡಾ|| ಫಕೀರಪ್ಪ ವಜ್ರಬಂಡಿ ಅಧ್ಯಕ್ಷತೆ ವಹಿಸಿದ್ದರು ಪದವಿ ಕಾಲೇಜಿನ ಪ್ರಾಚಾರ್ಯರಾದ ಡಾ|| ಸಿ.ಬಿ. ಚಿಲ್ಕರಾಗಿ ಆಶಯ ನುಡಿಯಾಡಿದರು. ಜಿ. ಎಸ್. ಗೋನಾಳ, ಎಚ್.ಎಸ್. ಪಾಟೀಲ್, ವಿ.ವಿ. ಗಂಗಣ್ಣವರ, ತತ್ವಪದಕಾರ ಶಿವಣ್ಣ ಹುಲ್ಲೂರ, ವೀರಣ್ಣ ನಿಂಗೋಜಿ, ಸೋಮನಗೌಡ ಪಾಟೀಲ, ಎಚ್.ಎಸ್. ತಿಮ್ಮಾರಡ್ಡಿ, ಎನ್.ಎ. ಕೆಂಚರಡ್ಡಿ ಇನ್ನೂ ಮೊದಲಾದ ಗಣ್ಯ ಮಾನ್ಯರು ಆಗಮಿಸಿ ಶುಭಕೋರಿದರು. ಶ್ರೀಮತಿ ಅನಸೂಯಾ ಜಹಗೀರದಾರ ಅವರ ಗಮಕ ವಾಚನ ಜನಮನ ಸೂರೆಗೊಂಡಿತು. ಮಲಿಕಸಾಬ ನೂರಭಾಷಾ ಅವರು ವಂದನೆ ಸಲ್ಲಿಸಿದರು.

ದಿನಾಂಕ: 02/01/2018 ಮಂಗಳವಾರ ತಳಕಲ್ ಉಡುರಾಜಮುಖಿ ದೇವಸ್ಥಾನದ 195ನೇ ಮಾಸಿಕ ಶಿವಾನುಭವ ಕಾರ್ಯಕ್ರಮದಲ್ಲಿ ಕುಮಾರ ವ್ಯಾಸನ ಕಾವ್ಯ ಭಾಗದ ಆಯ್ದ ಪದ್ಯಗಳನ್ನು ಜಿಲ್ಲಾ ಗಮಕ ಕಲಾ ಪರಿಷತ್ತಿನ ಅಧ್ಯಕ್ಷರಾದ ಡಾ|| ಫಕೀರಪ್ಪ ವಜ್ರಬಂಡಿ ಅವರು ವಾಚನ ಮಾಡಿ ವ್ಯಾಖ್ಯಾನ ನೀಡಿದರು, ಅಧ್ಯಕ್ಷತೆ ವಹಿಸಿದ ಡಾ|| ನಿಂಗಪ್ಪ ಕಂಬಳಿ ಆಧ್ಯಾತ್ಮ ಕುರಿತು ಮಾತನಾಡಿದರು. ಅತಿಥಿಗಳಾಗಿ ಆಗಮಿಸಿದ್ದ ಜಿಲ್ಲಾ ಕಸಾಪ ಪ್ರತಿನಿಧಿ ಮಲೀಕಸಾಬ ನೂರಭಾಷಾ ಮತ್ತು ತಳಕಲ್ಲ ಕಸಾಪ ಹೋಬಳಿ ಘಟಕದ ಅಧ್ಯಕ್ಷರಾದ ಶಾಂತಪ್ಪ ಪಟ್ಟಣಶೆಟ್ಟಿ ಆಗಮಿಸಿದ್ದರು.

ದಿನಾಂಕ 19/01/2018 ಶುಕ್ರವಾರ ಜಿಲ್ಲಾ ಗಮಕ ಕಲಾ ಪರಿಷತ್ತು ಇತಿಹಾಸ ಅಕಾಡೆಮಿ ಸಂಯುಕ್ತ ಆಶ್ರಯದಲ್ಲಿ ಸರಕಾರಿ ಪದವಿ ಪೂರ್ವ ಕಾಲೇಜು ತಳಕಲ್ಲಿನಲ್ಲಿ "ಐತಿಹಾಸಿಕ ಪರಂಪರೆ ಉಳಿಸಿ" ಕಾರ್ಯಕ್ರಮ ಆಯೋಜನೆ ಮಾಡಲಾಗಿತ್ತು ಇತಿಹಾಸ ಉಪನ್ಯಾಸಕರಾದ ಪರಶುರಾಮ ಕೊಂಕತಿ ವಿಶೇಷ ಉಪನ್ಯಾಸ ನೀಡಿದರು. ವಿದ್ಯಾರ್ಥಿಗಳಿಗೆ "ಸ್ವಾಮಿ ವಿವೇಕಾನಂದರ ಸಂದೇಶಗಳು" ಎಂಬ ವಿಷಯ ಕುರಿತು ಜಿಲ್ಲಾ ಗಮಕ ಕಲಾ ಪರಿಷತ್ತಿನ ಅಧ್ಯಕ್ಷ ಡಾ|| ಫಕೀರಪ್ಪ ವಜ್ರಬಂಡಿ ಮಾರ್ಮಿಕವಾಗಿ ಮಾತನಾಡಿದರು ಪ್ರಾಚಾರ್ಯ ವಿವಿ ಗಂಗಣ್ಣವರ ಅಧ್ಯಕ್ಷತೆ ವಹಿಸಿದ್ದರು.

ಬುಧವಾರ ದಿನಾಂಕ : 31/01/2018 ತಳಕಲ್ ಗ್ರಾಮದ ಉಡುರಾಜಮುಖಿ ದೇವಸ್ಥಾನದಲ್ಲಿ 196ನೇ ಮಾಸಿಕ ಶಿವಾನುಭವ ಕಾರ್ಯಕ್ರಮದಲ್ಲಿ ಡಾ|| ಫಕೀರಪ್ಪ ವಜ್ರಬಂಡಿ ಗಮಕ ವಾಚನ ಮಾಡಿದರೆ ಹಿರಿಯ ಸಾಹಿತಿ ವಿಠಪ್ಪ ಗೋರಂಟಿ 'ಗಮಕದಲ್ಲಿ ಆಧ್ಯಾತ್ಮ' ಕುರಿತು ಪ್ರವಚನ ನೀಡಿದರು ಮತ್ತು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕಾರ ಪಡೆದ ಕಾರಣ ಇವರಿಗೆ ಸನ್ಮಾನಿಸಲಾಯಿತು. ಜಿಲ್ಲಾ ಗಮಕ ಕಲಾ ಪರಿಷತ್ತಿನ ಕೋಶಾಧ್ಯಕ್ಷ ಮಲಿಕಸಾಬ ನೂರಭಾಷಾ ಮತ್ತು ನಾಗರಾಜ ಕುರಗೋಡ ಅತಿಥಿಗಳಾಗಿ ಭಾಗವಹಿಸಿದ್ದರು. ಎಚ್.ಕೆ. ಹೈತಾಪೂರ ನಿರೂಪಿಸಿದರು, ಬಸವರಾಜ ನರೆಗಲ್ ಸ್ವಾಗತಿಸಿದರು ಮತ್ತು ಅಣ್ಣಪ್ಪ ಬಂಗಾರಿ ವಂದನಾರ್ಪಣೆಗೈದರು.

ದಿನಾಂಕ 03/02/2018 ಶನಿವಾರ ಕೊಪ್ಪಳ ತಾಲೂಕಿನ ಗಮಕ ಕಲಾ ಪರಿಷತ್ತು ಮತ್ತು ಸರಕಾರಿ ಪ್ರೌಢ ಶಾಲೆ ಭಾಗ್ಯನಗರ ಇವರ ಸಂಯುಕ್ತಾಶ್ರಯದಲ್ಲಿ ಹತ್ತನೇ ತರಗತಿ ವಾರ್ಷಿಕ ಫಲಿತಾಂಶ ಸುಧಾರಣಾ ಕಾರ್ಯಾಗಾರ ಏರ್ಪಡಿಸಲಾಗಿತ್ತು ಇದರ ಉದ್ಘಾಟನೆಯನ್ನು ಜಿಲ್ಲಾ ಗಮಕ ಕಲಾ ಪರಿಷತ್ತಿನ ಅಧ್ಯಕ್ಷ ಡಾ|| ಫಕೀರಪ್ಪ ವಜ್ರಬಂಡಿ ನೆರವೇರಿಸಿದರು. ಮುಖ್ಯೋಪಾಧ್ಯಾಯಿನಿಯವರಾದ ಶ್ರೀಮತಿ ಸುಜಾತಾ ಜಟ್ಟರ್ ಅಧ್ಯಕ್ಷತೆ ವಹಿಸಿದ್ದರು.

ಪ್ರೊ. ಕೆ. ರಾಘವೇಂದ್ರರಾವ್, ಶ್ರೀಮತಿ ಶ್ರೀದೇವಿ ಪುರೋಹಿತ ಮತ್ತು ಭಾರತಿ ಅರಳಿಕಟ್ಟಿ ಗಮಕ ಕಲೆಯ ವಿವಿಧ ಪ್ರಕಾರಗಳ ಮೂಲಕ ಪಾಠ ಬೋಧನೆಯು ಬಹಳ ಪರಿಣಾಮಕಾರಿಯಾಗಿತ್ತು ಮತ್ತು ವಿದ್ಯಾರ್ಥಿಗಳಿಗೆ ತುಂಬಾ ಉಪಯುಕ್ತವಾಗಿತ್ತು. ಜಿಲ್ಲಾ ಉಪನಿರ್ದೇಶಕರ ಕಛೇರಿಯ ವಿಷಯ ಪರಿವೀಕ್ಷಕರಾದ ಶ್ರೀ ಬಡದಾನಿಯವರು ಮಾಧ್ಯಮಿಕ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಸೋಮಶೇಖರ ಹರ್ತಿ, ಸಿರಿಗನ್ನಡ ವೇದಿಕೆಯ ರಾಜ್ಯ ಉಪಾಧ್ಯಕ್ಷ ಜಿ ಎಸ್ ಗೋನಾಳ, ಕಸಾಪ ತಾಲೂಕ ಅಧ್ಯಕ್ಷ ಗಿರೀಶ ಪಾನಗಂಟಿ, ಹಿರಿಯ ಸಾಹಿತಿಗಳಾದ ವೀರಣ್ಣ ವಾಲಿ ಮತ್ತು ಶಿವಕುಮಾರ ಹಿರೇಮಠ ಭಾಗವಹಿಸಿದ್ದರು. ತಾಲೂಕ ಗಮಕ ಪರಿಷತ್ತಿನ ಅಧ್ಯಕ್ಷ ಶ್ರೀನಿವಾಸ ಚಿತ್ರಗಾರ ಪ್ರಾಸ್ತಾವಿಕ ನುಡಿ ಆಡಿದರು. ಮೆಹಬೂಬರವರು ಸ್ವಾಗತಿಸಿ, ನಿರೂಪಿಸಿ, ವಂದನಾರ್ಪಣೆ ಸಲ್ಲಿಸಿದರು.

ಗಂಗಾವತಿ ತಾಲೂಕ ಘಟಕದ ಉದ್ಘಾಟನೆ ದಿನಾಂಕ: 27/02/2018 ಮಂಗಳವಾರ ಡಾ॥ ಫಕೀರಪ್ಪ ವಜ್ರಬಂಡಿ ನೆರವೇರಿಸಿದರು. ತಾಲೂಕ ಘಟಕದ ಅಧ್ಯಕ್ಷ ಡಾ॥ ಜಗದೇವಿ ಕಲಶೆಟ್ಟಿ ಆಶಯ ನುಡಿ ಆಡಿದರು. ಶ್ರೀಮತಿ ಅನಸೂಯಾ ಜಹಗೀರದಾರ ಅವರು "ಕುಮಾರವ್ಯಾಸನ ಕರ್ನಾಟಕ ಭಾರತ ಕಥಾ ಮಂಜರಿ" ಕುರಿತು ವಿಶೇಷ ಉಪನ್ಯಾಸ ನೀಡಿದರಲ್ಲದೆ ಗಮಕ ವಾಚನ ಮತ್ತು ವ್ಯಾಖ್ಯಾನ ನಡೆಸಿಕೊಟ್ಟರು. ಸಂಶೋಧಕ ಸಾಹಿತಿ ಡಾ॥ ಶರಣಬಸಪ್ಪ ಕೊಟ್ಟೂರ, ಡಾ॥ ಮಮ್ತಾಜ್ ಬೇಗಂ, ಡಾ॥ ನಿಂಗಪ್ಪ ಕಂಬಳಿ ಉಪಸ್ಥಿತರಿದ್ದರು ಹಾಗೂ ಡಾ॥ ಅಬ್ದುಲ್ ರಹಿಮಾನ ಅಧ್ಯಕ್ಷತೆ ವಹಿಸಿದ್ದರು.

ದಿನಾಂಕ 01/03/2018 ಗುರುವಾರ ಉಡುಚಮ್ಮ ದೇವಿ ದೇವಸ್ಥಾನ ತಳಕಲ್‌ದಲ್ಲಿ 197ನೇ ಮಾಸಿಕ ಶಿವಾನುಭವ ಕಾರ್ಯಕ್ರಮದಲ್ಲಿ ಡಾ॥ ಫಕೀರಪ್ಪ ವಜ್ರಬಂಡಿ ಗಮಕ ವಾಚನ ಮತ್ತು ವ್ಯಾಖ್ಯಾನ ನಡೆಸಿಕೊಟ್ಟರು ಗದುಗಿನ ಶಿವಲಿಂಗಯ್ಯ ಶಾಸ್ತ್ರೀ ಹೊನಿಗನೂರಮಠ ಅವರು ಅಧ್ಯಕ್ಷತೆ ವಹಿಸಿ ಪ್ರವಚನ ನೀಡಿದರು. ಎಚ್. ಕೆ ಹೈಫರ್, ಮಲಿಕಸಾಬ ನೂರಭಾಷಾ, ಅಣ್ಣಪ್ಪ ಬಂಗಾರಿ ಮತ್ತು ಬಸವರಾಜ ನರೆಗಲ್ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ದಿನಾಂಕ 13/03/2018 ಮಂಗಳವಾರ ಕುಕನೂರ ತಾಲೂಕ ಘಟಕದ ಉದ್ಘಾಟನೆಯನ್ನು ಹಿರಿಯ ಸಾಹಿತಿ ಡಾ॥ ಕೆ ಬಿ ಬ್ಯಾಳಿ ನೆರವೇರಿಸಿದರು. ಅಧ್ಯಕ್ಷತೆಯನ್ನು ಡಾ॥ ಫಕೀರಪ್ಪ ವಜ್ರಬಂಡಿ ವಹಿಸಿದ್ದರು. ತಾಲೂಕ ಘಟಕದ ಅಧ್ಯಕ್ಷ ಕೃಷ್ಣ ರಂಗಣ್ಣ ಕುಲಕರ್ಣಿ ಗಮಕ ವಾಚನ ಮತ್ತು ವ್ಯಾಖ್ಯಾನ ಅದ್ಭುತವಾಗಿ ನಡೆಸಿಕೊಟ್ಟರು. ಲಲಿತಾ ಭಾವಿಕಟ್ಟಿ, ಲಕ್ಷ್ಮಣ ಹಿರೇಮನಿ, ಶಂಕ್ರಪ್ಪ ಗುಡಗೇರಿ, ಶಿವಲಿಂಗಪ್ಪ ಪಟ್ಟೆದ, ಶಾಂತಪ್ಪ ಪಟ್ಟಣಶೆಟ್ಟಿ ಗೋಣೆಪ್ಪ ಹಿರೇಮನಿ, ಎಂ. ಎಸ್. ಹಿರೇಮಠ, ಶಿವಪ್ಪ ಕರಮುಡಿ, ವೀರಣ್ಣ ಕೋನಾರಿ, ನೀಲಪ್ಪ ಕಡೆಮನಿ ಮತ್ತು ಇನ್ನೂ ಮುಂತಾದ ಗಣ್ಯರು ಪಾಲ್ಗೊಂಡಿದ್ದರು. ಶರಣಪ್ಪ ಕೊಪ್ಪದ ಕಾರ್ಯಕ್ರಮ ನಿರೂಪಿಸಿದರು, ಯಂಕಣ್ಣ ಯಡಿಯಾಪೂರ ಸ್ವಾಗತಿಸಿದರು. ಪ್ರಕಾಶ ಗಡ್ಡದ ವಂದಿಸಿದರು.

## ವಿಜಯಪುರ ಜಿಲ್ಲಾ ವರದಿ

ರಾಮಾಯಣ-ಮಹಾಭಾರತ ಕಥೆಗಳು ನಮ್ಮ ಸಂಸ್ಕೃತಿಯ ಪ್ರತೀಕ

ವಿಜಯಪುರ-ದಿ:23-02-18ರಂದು ಜಿಲ್ಲಾ ಗಮಕ ಕಲಾ ಪರಿಷತ್ತು ವಿಜಯಪುರರವರ ವತಿಯಿಂದ ದತ್ತಿ ಗಮಕ ವಾಚನ ವ್ಯಾಖ್ಯಾನ ಕಾರ್ಯಕ್ರಮಗಳನ್ನು ಆಯೋಜಿಸಿದ್ದರು. ನಮ್ಮ ದೇಶದ ಸಂಸ್ಕೃತಿಯನ್ನು ರಾಮಯಣ ಮಹಾಭಾರತದ ಸುಂದರ ಕಥೆಗಳಿಂದ ತಿಳಿದುಕೊಳ್ಳಲು ದಾರಿದೀಪವಾಗಿದೆ. ರಾಮಯಣ ಕಥೆಗಳು ಶಾಲಾಮಕ್ಕಳಿಗೆ ಓದಲು ಪ್ರೇರೇಪಿಸಬೇಕು. ಮಕ್ಕಳು ನೈತಿಕತೆದಿಂದ ಭವಿಷ್ಯತ್ತನ್ನು ನಿರ್ಮಿಸಿಕೊಳ್ಳಲು ಸಾಧ್ಯವೆಂದು ಅತಿಥಿಗಳಾದ ಶ್ರೀ ಚೆನ್ನಪ್ಪ ಹೆಗಡೆಯವರು ಹೇಳಿದರು. ಮತ್ತೊಬ್ಬ ಅತಿಥಿಗಳಾದ ಶ್ರೀ ಬಾ.ಇ.ಕುಮಠೆ ಅವರು ಜಿಲ್ಲಾ ಗಮಕ ಕಲಾ ಪರಿಷತ್ತಿನ ನಿರಂತರ ಕಾರ್ಯಚಟುವಟಿಕೆಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ರಾಮಯಣದ ಹತ್ತು ಶ್ಲೋಕಗಳನ್ನು ಗಮಕ ವಾಚಕರಾದ ಶ್ರೀ ವೇಣುಗೋಪಾಲ ವ್ಹಿ. ಕಟ್ಟಿ ಸುಶ್ರಾವ್ಯವಾಗಿ ವಾಚನ-ವ್ಯಾಖ್ಯಾನವನ್ನು ನೇರವೇರಿಸಿದರು. ಶಾಲಾ ಮಕ್ಕಳು ಕುತುಹಲದಿಂದ ಆಲಿಸಿದರು.

ಅಧ್ಯಕ್ಷತೆ ವಹಿಸಿದ ಶ್ರೀ ಎಲ್.ಪಿ.ಬಿರಾದಾರ ಶಾಲೆ-ಕಾಲೇಜುಗಳಲ್ಲಿ ಇಂದಿನ ಮಕ್ಕಳಿಗೆ ಗಮಕ ಕಲಾ ಕಾರ್ಯಕ್ರಮಗಳಿಂದ ಅತ್ಯಂತ ಉಪಯುಕ್ತವಾಗುತ್ತವೆ ಎಂದು ಜಿಲ್ಲಾ ಘಟಕದ ಕಾರ್ಯವನ್ನು ಮೆಚ್ಚಿಕೊಂಡರು. ಪ್ರಾರಂಭದಲ್ಲಿ ಗಮಕ ಕಲಾ ಪರಿಷತ್ತಿನ ಪರಿಚಯ ನೀಡುತ್ತ ಎಲ್ಲರ ಸಹಾಯ-ಸಹಕಾರವನ್ನು ಬಯಸಿ ವಚನ ಗಾಯನ ಮಾಡಿ ಜಿಲ್ಲಾ ಅಧ್ಯಕ್ಷ ಬಿ.ಎಂ.ಪಾಟೀಲರವರು ಪ್ರಾಸ್ತಾವಿಕ ನುಡಿಗಳನ್ನು ಹೇಳಿದರು.

ಶಿಕ್ಷಕರಾದ ಶ್ರೀ ಅಂಕೇರಿ ಮಠಕಾರ್ಯಕ್ರಮ ನಿರೂಪಿಸಿದರು. ಸರ್ವರನ್ನು ಸ್ವಾಗತಿಸಿದ ಶ್ರೀಮತಿ ಬಿರಾದರಾ ಕೊನೆಯಲ್ಲಿ ವಂದನೆ ಸಲ್ಲಿಸಿದರು.

# ಪರಿಷತ್ತಿನಲ್ಲಿ ವಿಶ್ವ ಮಹಿಳಾ ದಿನಾಚರಣೆ



ಕರ್ನಾಟಕ ಗಮಕ ಕಲಾ ಪರಿಷತ್ತು ಇದೇ ಏಪ್ರಿಲ್11 ನೇ ತಾರೀಖು , ಶನಿವಾರ ವಿಶ್ವ ಮಹಿಳಾ ದಿನಾಚರಣೆಯನ್ನು ತನ್ನದೇ ಆದ ರೀತಿಯಲ್ಲಿ ಆಚರಿಸಿತು. ಇದರ ಅಂಗವಾಗಿ ಗಮಕ ರೂಪಕ ಕಾರ್ಯಕ್ರಮವನ್ನು ಆಯೋಜಿಸಿತ್ತು. ಕನ್ನಡದ ಕಾವ್ಯಗಳು ಚಿತ್ರಿಸಿರುವ ಅತ್ಯಂತ ಶಕ್ತಿ ಶಾಲಿಯಾದ, ಗಟ್ಟಿ ಪಾತ್ರವೆಂದರೆ ದ್ರೌಪದಿಯದು. ಈ ಪಾತ್ರವನ್ನು ಕೇಂದ್ರದಲ್ಲಿ ಇರಿಸಿಕೊಂಡು ಆ ದಿನ "ದ್ರೌಪದಿ ವಿಜಯ" ಎಂಬ ಗಮಕ ರೂಪಕವನ್ನು ನಿರ್ದೇಶಿಸಿ ಪ್ರಸ್ತುತ ಪಡಿಸಿದವರು ಹಿರಿಯ ಗಮಕ ವಿದುಷಿ ಹಿರಿಯ ಗಮಕ ವಿದುಷಿ ಶ್ರೀಮತಿ ಜಯರಾಂ ಅವರು. ಇವರೊಂದಿಗೆ ರೇಖಾ ಪ್ರಸಾದ್, ಶ್ರೀದೇವಿ ಐಯ್ಯಂಗಾರ್, ದೀಪ್ತಾ, ಹೇಮಾ ರವಿಶಂಕರ್ ಮತ್ತು ಸುಮಾ ಸುದರ್ಶನ್. ಇವರು ಭಾಗವಹಿಸಿದ ಸಹ ಕಲಾವಿದರುಗಳು. ಭೀಮ, ಕೀಚಕನಂತಹ ಅಪ್ಪಟ ಗಂಡು ಪಾತ್ರಗಳನ್ನೂ ಮಹಿಳಾ ಕಲಾವಿದರೇ ಪ್ರೇಕ್ಷಕರು ಸೈ ಎನ್ನುವಂತೆ ನಿರ್ವಹಿಸಿದರು. ಕಾರ್ಯಕ್ರಮವು ಗಿರಿನಗರದಲ್ಲಿರುವ ಶೃಂಗೇರಿ ಶ್ರೀ ಶಾರದಾ ದೇವಾಲಯದಲ್ಲಿರುವ ಯಾಗ ಮಂಟಪದಲ್ಲಿ ನಡೆಯಿತು. ಸುಮಾರು ಐವತ್ತಕ್ಕೂ ಹೆಚ್ಚು ಮಂದಿ ಕಾರ್ಯಕ್ರಮವನ್ನು ಕೇಳಿ ಆನಂದಿಸಿದರು. ಈ ಕಾರ್ಯಕ್ರಮಕ್ಕೆ ಗಮಕಿ ದಿವಂಗತೆ ಶ್ರೀಮತಿ ಇಂದಿರಾ ವೆಂಕಟೇಶ ಅವರ ಪತಿ ಶ್ರೀಯುತ ಐ.ವಿ. ವೆಂಕಟೇಶ್ ಅವರು ಪ್ರಾಯೋಜಕರಾಗಿದ್ದು ಪ್ರೋತ್ಸಾಹಿಸಿದರು. ಗಮಕ ಕಲಾ ಪರಿಷತ್ತಿನ ಕಾರ್ಯದರ್ಶಿ ಶ್ರೀಮತಿ ಶಾಂತಾ ಗೋಪಾಲರು ಸಭೆಗೆ ಸ್ವಾಗತ ಕೋರುತ್ತಾ ಕಲಾವಿದರನ್ನು ಪರಿಚಯಿಸಿದರು. ಅಧ್ಯಕ್ಷರಾದ ಶ್ರೀಮತಿ ಗಂಗಮ್ಮ ಕೇಶವ ಮೂರ್ತಿ ವಂದನಾರ್ಪಣೆ ಮಾಡಿ, ಕಲಾವಿದರಿಗೆ ಗೌರವ ಸಮರ್ಪಣೆ ಮಾಡಿದರು. ಶಂಕರ ಸೇವಾ ಸಮಿತಿಯ ಅಧ್ಯಕ್ಷರಾದ ಶ್ರೀ ನಾಗರಾಜರು ಕಾರ್ಯಕ್ರಮದ ಬಗೆಗೆ ಮೆಚ್ಚುಗೆ ವ್ಯಕ್ತ ಪಡಿಸಿ ತಮ್ಮ ಸಮಿತಿಯ ವತಿಯಿಂದ ಕಲಾವಿದರನ್ನು ಗೌರವಿಸಿದ್ದು ವಿಶೇಷವಾಗಿತ್ತು.

# ಕರ್ನಾಟಕ ಗಮಕಕಲಾ ಪರಿಷತ್ತಿನ ಮಾಜಿ ಕಾರ್ಯದರ್ಶಿಗಳಿಗೆ ಗೌರವ ಡಾಕ್ಟೋರೇಟ್ ಪದವಿ



ಕರ್ನಾಟಕ ಗಮಕಕಲಾ ಪರಿಷತ್ತಿನಲ್ಲಿ ಶ್ರೀಯುತ ಜಿ. ನಾರಾಯಣರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡಿರುವ ಶ್ರೀಯುತ ಎಸ್. ರಮಾದೇವಿ ವಿಶ್ವೇಶ್ವರಯ್ಯ ಇವರಿಗೆ ಮಹಾರಾಷ್ಟ್ರದ ಪುಣೆ ನಗರದಲ್ಲಿನ "ಇಂಡಿಯನ್ ವರ್ಚುಅಲ್ ಅಕಾಡಮಿ ಫಾರ್ ಪೀಸ್ ಅಂಡ್ ಎಜುಕೇಷನ್" ಸಂಸ್ಥೆಯು ಗೌರವ ಡಾಕ್ಟೋರೇಟ್ ಪದವಿ ನೀಡಿ ಗೌರವಿಸಿದ್ದಾರೆ. ಇದೇ 2018ರ ಮಾರ್ಚ್ 17 ರಂದು ಈ ಅಕಾಡಮಿಯವರು ಆಯೋಜಿಸಿದ್ದ ಭವ್ಯ ಘಟಿಕೋತ್ಸವ ಸಮಾರಂಭದಲ್ಲಿ ರಾಷ್ಟ್ರದಾದ್ಯಂತ ಆಯ್ದ 40ಕ್ಕೂ ಹೆಚ್ಚು ನಾಡು–ನುಡಿಗಾಗಿ ತಮ್ಮನ್ನು ತೊಡಗಿಸಿಕೊಂಡು ಕೆಲಸ ಮಾಡುತ್ತಿರುವ ಅರ್ಹರನ್ನು ಗೌರವ ಡಾಕ್ಟೋರೇಟ್ ನೀಡಿ ಗೌರವಿಸಿದ್ದಾರೆ. ಶ್ರೀಮತಿ ರಮಾದೇವಿಯವರು ಸಹ ತಮ್ಮನ್ನು ಕನ್ನಡಪರ ಹಾಗೂ ಸಮಾಜ ಸೇವೆಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಕೆಲಸ ಮಾಡುತ್ತಾ ಬಂದಿದ್ದಾರೆ. ಈಗಲೂ ಚಟುವಟಿಕೆಯಿಂದ ಕೆಲಸ ಮಾಡುತ್ತಿದ್ದಾರೆ. ದಕ್ಷಿಣ ಭಾರತದಿಂದ ಆಯ್ಕೆಯಾದ ಕೆಲವೇ ವ್ಯಕ್ತಿಗಳಲ್ಲಿ ಶ್ರೀಮತಿ ಎಸ್.ರಮಾದೇವಿಯವರೂ ಒಬ್ಬರು. ಪರಿಷತ್ತು ಇವರನ್ನು ತುಂಬು ಮನಸ್ಸಿನಿಂದ ಅಭಿನಂದಿಸುತ್ತದೆ.

# ವ್ಯಕ್ತಿ ಪರಿಚಯ



ಶ್ರೀಮತಿ ಸತ್ಯವತಿ ರಾಮನಾಥರವರು ಹಾಸನ ಜಿಲ್ಲೆಯ ಮರಿತಮ್ಮನ ಹಳ್ಳಿ ಗ್ರಾಮದಲ್ಲಿ ಶ್ರೀಮತಿ ಅನಂತಲಕ್ಷ್ಮಿ ಶ್ರೀ ಸೂರ್ಯನಾರಯಣ ದಂಪತಿಗಳ ಸುಪುತ್ರಿಯಾಗಿ 1951 ರಲ್ಲಿ ಜನಿಸಿದರು. ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿ ಪಡೆದು 30ಕ್ಕು ಹೆಚ್ಚು ವರ್ಷಗಳ ಕಾಲ ಸಂಸ್ಕೃತ ಅಧ್ಯಾಪಕರಾಗಿ ಸೇವೆ ಸಲ್ಲಿಸಿ ಸಾವಿರಾರು ವಿದ್ಯಾರ್ಥಿಗಳನ್ನು ಸನ್ಮಾರ್ಗದಲ್ಲಿ ಕೊಂಡೊಯ್ದು 'ಆದರ್ಶ ಶಿಕ್ಷಕಿ' ಎಂಬ ಹೆಸರಿಗೆ ಪಾತ್ರರಾಗಿದ್ದಾರೆ.

ಶ್ರೀಮತಿಯವರು ಮೂವತ್ತಕ್ಕೂ ಹೆಚ್ಚು ವರ್ಷಗಳಿಂದ ಗಮಕ ವಾಚನಕ್ಕೆ ವ್ಯಾಖ್ಯಾನ ನೀಡುವುದರ ಮೂಲಕ ಕನ್ನಡದ ವರಕವಿಗಳಾದ ಕುಮಾರವ್ಯಾಸ, ಲಕ್ಷೀಶ, ರಾಘವಾಂಕ, ನರಹರಿ, ಕುವೆಂಪು ಮೊದಲಾದವರನ್ನು ಕೇಳುಗರಿಗೆ ಪರಿಚಯಿಸಿದ್ದಾರೆ. ಇವರ ಸಾವಿರಾರು ವ್ಯಾಖ್ಯಾನ ಕಾರ್ಯಕ್ರಮಗಳು ರಾಜ್ಯದ ಅನೇಕ ಕಡೆಗಳಲ್ಲಿ ಮುಖ್ಯವಾಗಿ ಬೆಂಗಳೂರು, ಮೈಸೂರು, ತುಮಕೂರು, ಕನಕಪುರ, ಹಾಸನ, ಚಿಕ್ಕಮಂಗಳೂರು ನಗರಗಳಲ್ಲಿ ನಡೆದಿದೆ. ಬೆಂಗಳೂರಿನ ಆರ್ಯ ಸಮಾಜದಲ್ಲಿ ಏಳು ವರ್ಷಕ್ಕೂ ಮಿಗಿಲಾಗಿ ಪಂ. ಸುಧಾಕರ ಚತುರ್ವೇದಿಯವರು ರಚಿಸಿರುವ ಮಹರ್ಷಿ ದಯಾನಂದ ಸರಸ್ವತಿಯವರ ಜೀವನ ಚರಿತ್ರೆಯ ವಾಚನಕ್ಕೆ ವ್ಯಾಖ್ಯಾನ ನೀಡಿ ಸನ್ಮಾನಿತರಾಗಿದ್ದಾರೆ.

ಕಾವ್ಯಗಳಲ್ಲಿರುವ ಕಥೆಯನ್ನು ರಂಜಿಸುವಂತೆ ಹೇಳುವುದಷ್ಟೇ ಅಲ್ಲದೆ, ಕವಿಗಳ ಅಂತರಂಗವನ್ನು ಸರಿಯಾಗಿ ಗ್ರಹಿಸಿ ಅವುಗಳಲ್ಲಿರುವ ಸಾಮಾಜಿಕ ಮೌಲ್ಯಗಳನ್ನು, ತತ್ತ್ವ ವಿಚಾರಗಳನ್ನು ಕೇಳುಗರ ಮನಮುಟ್ಟುವಂತೆ ವಿವರಿಸುವುದು ಇವರ ವೈಶಿಷ್ಟ್ಯ. ಶ್ರೀಮತಿಯವರ ಕನ್ನಡ ಭಾಷಾ ಪ್ರೌಢಿಮೆ, ಆಳವಾದ ವಿಚಾರ ಸಂಪತ್ತು, ವ್ಯಾಖ್ಯಾನಿಸುವ ಶೈಲಿ ಅತ್ಯಂತ ಮೆಚ್ಚುಗೆಯಾಗಿರುತ್ತದೆ.

ಶ್ರೀಮತಿ ಸತ್ಯವತಿಯವರು ಕರ್ನಾಟಕ ಗಮಕ ಕಲಾ ಪರಿಷತ್ತಿನ ಗಮಕ ಕಾವೇರಿ ಯೋಜನೆ, ಗ್ರಾಮಾಂತರ ಗಮಕ ಯೋಜನೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿರುವುದಲ್ಲದೇ, ಸದಸ್ಯರ ನೋಂದಾವಣಿ, ದತ್ತಿ ನಿಧಿ ಸ್ಥಾಪನೆಯಲ್ಲಿ ಶ್ರಮವಹಿಸಿ, ಗಮಕ ಕಲಾ ಪರಿಷತ್ತಿನ ಆರ್ಥಿಕ ಸಂಪತ್ತನ್ನು ಹೆಚ್ಚಿಸಲು ನೆರವಾಗಿದ್ದಾರೆ. ಅನೇಕ ಪ್ರೌಢಶಾಲೆಗಳಲ್ಲಿ ಪಠ್ಯಪುಸ್ತಕ ಆಧಾರಿತ ಗಮಕ ಕಾರ್ಯಕ್ರಮಗಳನ್ನೆ ನೀಡಿ ವಿದ್ಯಾರ್ಥಿಗಳು ಪರೀಕ್ಷೆ ಎದುರಿಸುವಂತೆ ನೆರವಾಗಿದ್ದಾರೆ.

ಲೇಖಕಿಯಾಗಿಯೂ ತಮ್ಮನ್ನು ಗುರುತಿಸಿಕೊಂಡಿರುವ ಶ್ರೀಮತಿಯವರು, ಬಹುಮುಖವಾದ ಮೌಲ್ಯಗಳಿಂದ ಕೂಡಿದ ಪುಸ್ತಕಗಳನ್ನು ರಚಿಸಿದ್ದಾರೆ. ಪ್ರಕಟಣೆಯಾಗಿರುವ ಪುಸ್ತಕಗಳೆಂದರೆ 'ಭಾರತೀಯ ಹಬ್ಬಗಳು', 'ಸಂಸ್ಕೃತಿ ಸಿಂಚನ', 'ಮಹಿಳಾ ಸಾಧಕರು', ನಾರಿ ಅಂಕಣ [ಹಿಂದಿಯಿಂದ ಅನುವಾದ], ದಿವ್ಯ ತುಳಸಿ, ಕುಮಾರವ್ಯಾಸ ಭಾರತದ ಆಯ್ದ ಸಂಧಿಗಳಿಗೆ ವ್ಯಾಖ್ಯಾನ ಬಂಧ (ಸಂಗೀತ ನೃತ್ಯ ಅಕಾಡಮಿಯಿಂದ ಪ್ರಕಟಣೆ), ಇತ್ಯಾದಿ.

ಅನೇಕ ಕಡೆಗಳಲ್ಲಿ ಮಹಿಳಾ ಸತ್ಸಂಗಗಳನ್ನು ಸ್ಥಾಪಿಸಿ ಅವುಗಳ ಕಾರ್ಯಗಳು ನಿರಂತರವಾಗಿ ನಡೆಯಲು ಕಾರಣಕರ್ತರಾಗಿದ್ದಾರೆ. ಮಹಿಳೆಯರ ಪರಿಸ್ಥಿತಿಯನ್ನು ಅವರ ಸ್ಥಾನಮಾನಗಳನ್ನು ಕುರಿತು ಅನೇಕ ಉಪನ್ಯಾಸಗಳನ್ನು, ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆದಿದ್ದಾರೆ. ಮಹಿಳೆಯರನ್ನು ಸಂಘಟಿಸಿ, ಅವರಿಗೆ ತರಬೇತಿ ನೀಡಿ ತಮ್ಮ ಸಮಸ್ಯೆ ಚರ್ಚಿಸಲು ಅನೇಕ ದೂರದರ್ಶನದ ಕಾರ್ಯಕ್ರಮಗಳನ್ನು ನಿರ್ದೇಶಿಸಿ ಭಾಗವಹಿಸಿದ್ದಾರೆ.

ಆಧ್ಯಾತ್ಮಿಕ ಹಾಗೂ ವೈದಿಕ ವಿಚಾರಗಳ ಬಗ್ಗೆ ಇವರಿಗೆ ಆಳವಾದ ಆಸಕ್ತಿಯಿದ್ದು, ಕಳೆದ ಎರಡು ದಶಕಗಳಿಂದ ಈ ವಿಷಯದ ಬಗ್ಗೆ ನೂರಾರು ಉಪನ್ಯಾಸಗಳನ್ನು ನೀಡಿದ್ದಾರೆ. ರಾಮಾಯಣ, ಮಹಾಭಾರತ, ಭಾಗವತ, ದೇವೀಭಾಗವತ ಮುಂತಾದ ಗ್ರಂಥಗಳಿಂದ ಆಯ್ದ ವಿಚಾರಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ ಹಾಗೂ ವೇದಕಾಲೀನ ಮಹಿಳೆಯರ ಪರಿಸ್ಥಿತಿ, ವೇದಗಳಲ್ಲಿ ಕುಟುಂಬ ವ್ಯವಸ್ಥೆರಾಷ್ಟ್ರೀಯ ಭಾವೈಕ್ಯತೆಗೆ ವೇದಗಳ ಕೊಡುಗೆ ಮುಂತಾದ ಮಹತ್ವಪೂರ್ಣ ವಿಷಯಗಳ ಬಗ್ಗೆ ಅನೇಕ ಸಂಸ್ಥೆಗಳಲ್ಲಿ ದೂರದರ್ಶನಗಳಲ್ಲಿ, ಆಕಾಶವಾಣಿಯಲ್ಲಿ ಉಪನ್ಯಾಸ ಹಾಗೂ ಲೇಖನಗಳನ್ನು ಬರೆದಿದ್ದಾರೆ. ಸಂಗೀತಾಭ್ಯಾಸಿಗಳಿಗೆ ಸಂಸ್ಕೃತದಲ್ಲಿರುವ ಕೀರ್ತನೆಗಳನ್ನು ಕನ್ನಡಕ್ಕೆ ಅನುವಾದಿಸಿಕೊಟ್ಟು ನೆರವಾಗಿದ್ದಾರೆ.

ಶ್ರೀಮತಿಯವರ ಬಹುಮುಖ ಸೇವೆಯನ್ನು ಗುರುತಿಸಿ ಅನೇಕ ಸಂಘ ಸಂಸ್ಥೆಗಳಲ್ಲಿ ಸನ್ಮಾನಿಸಲಾಗಿದೆ. ಗಮಕ ವ್ಯಾಖ್ಯಾನ ಕಲೆಗೆ ಇವರ ಅನೇಕ ವರ್ಷಗಳ ಸೇವೆಯನ್ನು ಪರಿಗಣಿಸಿ ಗಮಕ ಕಲಾ ಪರಿಷತ್ತಿನ 9ನೇ ವಾರ್ಷಿಕ ಸಮ್ಮೇಳನದಲ್ಲಿ ಸನ್ಮಾನಿಸಲಾಯಿತು. ಬೆಂಗಳೂರಿನ ಆರ್ಯ ಸಮಾಜದಲ್ಲಿ ವೇದ ರಕ್ಷಣೆಗೆ ಮತ್ತು ವೇದ ಪ್ರಚಾರಕ್ಕಾಗಿ ಇವರ ಸೇವೆಯನ್ನು ಗುರುತಿಸಿ 'ವೇದ ಸಂರಕ್ಷಕಿ' ಎಂದು ಸನ್ಮಾನಿಸಿದ್ದಾರೆ. ಕೆಂಗೇರಿಯ ಶ್ರೀ ಸರಸ್ವತಿ ಸಂಗೀತ ಸಾಹಿತ್ಯ ಸದನವು ಇವರನ್ನು 'ವೈದಿಕ ಧಾರ್ಮಿಕ ವೈಚಾರಿಕ ಶೀಲೆ ' ಎಂದು ಗುರುತಿಸಿ ಸನ್ಮಾನಿಸಿದ್ದಾರೆ . ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯು ಗಮಕ ಕಲೆಗೆ ಇವರಿಗೆ 2017 ರ 'ಕರ್ನಾಟಕ ಕಲಾಶ್ರೀ' ಪ್ರಶಸ್ತಿ ನೀಡಿ ಗೌರವಿಸಿದೆ.

**ಗಮಕ ರಸಪ್ರಶ್ನೆಗಳು:**

1. ಆದಿ ಗಮಕಿಗಳು ಯಾರು?
2. ಮಾತೃದೇವೋಭವ ಎಂದ ಉಪನಿಷತ್ತು ಯಾವುದು ?
3. ದತ್ತ ದರ್ಶನದ ಕರ್ತೃವಾದ ಹಿರಿಯ ಗಮಕಿ ಯಾರು?
4. ಕರ್ನಾಟಕ ಸಂಗೀತ ಪಿತಾಮಹ ಎಂದು ಯಾರನ್ನು ಕರೆಯುತ್ತೇವೆ?
5. ಆದ್ಯ ಗಮಕ ತ್ರಯರು ಯಾರು?
6. ಕುಮಾರ ವಾಲ್ಮೀಕಿಯ ನಿಜ ನಾಮಧೇಯವೇನು?
7. ಅಖಿಲ ಕರ್ನಾಟಕ ಮಕ್ಕಳ ಪ್ರಥಮ ಗಮಕ ಕಲಾ ಸಮ್ಮೇಳನ ಎಲ್ಲಿ- ಯಾವಾಗ ನಡೆಯಿತು?
8. "ವಿವಿಧ ರಾಗಂಗಳಂ ಬಳಸಿ ಪಾಡಿಸಿದನೆರಡನೆಯ ತುಂಬುರು ನಾರದರ ತೆರದಿ ಕುಶಲವರನು" ಯಾವ ಕಾವ್ಯದ ಸಾಲುಗಳಿವು?
9. ಪಂಚತಂತ್ರವನ್ನು ಕನ್ನಡಕ್ಕೆ ತಂದವರು ಯಾರು ?
10. ಸುಳಾದಿ ದಾಸರು ಎಂದೇ ಪ್ರಸಿದ್ಧರಾದ ಹರಿದಾಸರು ಯಾರು?
11. ಸೀತೆಯನ್ನು ಷಟ್ಪದಿಯಲ್ಲಿ ದರ್ಶಿಸಿದ ದಿವಂಗತ ಹಿರಿಯ ಗಮಕಿ ಯಾರು?
12. "ಕಟ್ಟಿಯುಮೇನೊ ಮಾಲೆಗಾರನ ಪೊಸಬಾಸಿಗಂ ಮುಡಿವ ಭೋಗಿಗಳಿಲ್ಲದೆ ಬಾಡಿಪೋಗದೆ" ಅಂದವರು ಯಾರು?
13. ಕರ್ನಾಟಕ ಗಮಕ ಕಲಾ ಪರಿಷತ್ತು ಯಾವಾಗ ಪ್ರಾರಂಭವಾಯಿತು ?
14. ವ್ಯಾಸ ಮಹರ್ಷಿಯ ಮತ್ತೊಂದು ನಾಮಧೇಯವೇನು ?
15. ಕರಿಮುಖನ ಹೆಸರಿನ ನಾಡಿನ ಪ್ರಖ್ಯಾತ ವ್ಯಾಖ್ಯಾನಕಾರರೂ ಹಾಗೂ ಅವಧಾನಿಗಳೂ ಆಗಿರುವವರು ಯಾರು?

- ಶ್ರೀಮತಿ ವಿಜಯ ರಂಗನಾಥ್
ಬೆಂಗಳೂರು

'ಗಮಕ ರಸಪ್ರಶ್ನೆ'ಗೆ ಸಂಬಂಧಿಸಿದಂತೆ ಸರಿಯಾದ ಉತ್ತರವನ್ನು ಜೂನ್ 15, 2018ರ ಒಳಗಾಗಿ ಪೋಸ್ಟ್ ಕಾರ್ಡ್‌ನಲ್ಲಿ ಅಥವಾ ವಾಟ್ಸ್‌ಪ್(9341392624) ಮೂಲಕ ತಮ್ಮ ವಿಳಾಸದೊಂದಿಗೆ ಕೇವಲ ಉತ್ತರಗಳನ್ನು ಮಾತ್ರ ಕ್ರಮಸಂಖ್ಯೆಯೊಂದಿಗೆ ಬರೆದು ಕಳುಹಿಸಬೇಕು. ಸಂಪೂರ್ಣ ಸರಿಯಾದ ಉತ್ತರವಿರುವ ಇಬ್ಬರು ಅದೃಷ್ಟಶಾಲಿಗಳಿಗೆ ಪುಸ್ತಕ ಬಹುಮಾನದೊಂದಿಗೆ ಮುಂದಿನ ಸಂಚಿಕೆಯಲ್ಲಿ ಅವರನ್ನು ಅಭಿನಂದಿಸುತ್ತೇವೆ.

* ಪತ್ರಿಕೆಯ ಬೆಳವಣಿಗೆಯ ದೃಷ್ಟಿಯಿಂದ ಪ್ರಾಯೋಜಕತ್ವ ಅವಶ್ಯಕವಾಗಿದ್ದು ಪತ್ರಿಕೆಯ ಪ್ರಾಯೋಜಕರಾಗಿ, ಜಾಹೀರಾತುದಾರರಾಗಿ, ಗಮಕ ಪ್ರಚಾರ ಸೇವೆಯ ಕೈಂಕರ್ಯದಲ್ಲಿ ತಾವೂ ಪಾಲ್ಗೊಳ್ಳಬೇಕಾಗಿ ವಿನಂತಿ.
* ಗಮಕ ದುಂದುಭಿಯ ಈ ಹೊಸ ಪ್ರಯತ್ನದ ಬಗ್ಗೆ ನಿಮ್ಮ ಮುಕ್ತ ಅಭಿಪ್ರಾಯಗಳನ್ನು ಹಾಗೂ ಸಲಹೆ - ಸೂಚನೆಗಳನ್ನು ನೀಡಲು 'ಗಮಕ ಚಾವಡಿ' ಎಂಬ ಅಂಕಣ ರೂಪಿಸುವ ಆಲೋಚನೆಯಿದ್ದು, ಐದಾರು ಸಾಲುಗಳನ್ನು ಮೀರದಂತೆ ಚಿಕ್ಕದಾಗಿಯೂ - ಚೊಕ್ಕದಾಗಿಯೂ ನಿಮ್ಮ ಬರಹವಿರಲಿ.

- ಸಂಪಾದಕರು

**ವಿಶೇಷ ದಾನಿಗಳು**

| | | |
|---|---|---|
| **ಶ್ರೀ ಕೆ. ಶೇಷಣ್ಣ ರಾಜಾಜಿನಗರ, ಬೆಂಗಳೂರು** | - | **ರೂ. 50,000/-** |
| **ಶ್ರೀ ಸಿ. ಎನ್. ತಿಮ್ಮಪ್ಪಯ್ಯ, ಬನ್ನೇರುಘಟ್ಟ, ಬೆಂಗಳೂರು** | - | **ರೂ. 50,000/-** |

**ದುಂದುಭಿಗೆ ಶುಭಹಾರೈಸಿದ ಗಮಕಾಭಿಮಾನಿಗಳು**

**(ಪ್ರತಿಯೊಬ್ಬರು 1000ರೂಗಳನ್ನು ಕೊಟ್ಟು ಜಾಹೀರಾತುದಾರರಾಗಿ ಶುಭಹಾರೈಸಿದ್ದಾರೆ)**

1. ಶ್ರೀಮತಿ ಸುನೀತಾ ಶೆಣೈ, ವಿ.ಬಿ.ಎಚ್.ಎಸ್ ಲೇ ಔಟ್, ಗಿರಿನಗರ 4ನೆಯ ಹಂತ, ಬೆಂಗಳೂರು.
2. ಶ್ರೀಯುತ ಐ. ಎಸ್. ವೆಂಕಟೇಶ್, ಬ್ಯಾಂಕ್ ಕಾಲೋನಿ, ಬೆಂಗಳೂರು.
(ತಮ್ಮ ಪತ್ನಿ ಗುರುಕೃಪಾ ಗಮಕ ಮಂಡಳಿಯ ಸಂಸ್ಥಾಪಕಿ ಗಮಕಿ ದಿ। ಇಂದಿರಾ ವೆಂಕಟೇಶ್ ಅವರ ಸ್ಮರಣೆಯಲ್ಲಿ)
3. ಶ್ರೀಯುತ ಶ್ರೀನಿವಾಸರಾವ್, ನಿವೃತ್ತ ಅಧಿಕಾರಿಗಳು, ರೇಷ್ಮೆ ಇಲಾಖೆ, 100 ಅಡಿ ರಸ್ತೆ, ವಿನೋಬಾ ನಗರ, ಮಂಡ್ಯ.
4. ಶ್ರೀಮತಿ ಕಲಾವತಿ ಮತ್ತು ಕುಟುಂಬ, ಇ ಅಂಡ್ ಎಫ್ ಬ್ಲಾಕ್ ರಾಮಕೃಷ್ಣನಗರ, ಮೈಸೂರು.

ಪತ್ರಿಕೆಗೆ ಸಂಬಂಧಿಸಿದ ಮಾಹಿತಿಗಾಗಿ ಸಂಪರ್ಕಿಸಿ: **ಕೃ. ಪಾ. ಮಂಜುನಾಥ್**
Mob. 9341392624, Kru.pa.manjunath.krn@gmail.com



ಮುಕ್ತಕ ಅಕಾಡೆಮಿಯಿಂದ ಸನ್ಮಾನಿತರಾದ ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್ ಹಾಗೂ
ಕರ್ನಾಟಕ ಕಲಾಶ್ರೀ ಜಿ.ಹೆಚ್. ನಾಗರತ್ನ ಅವರೊಂದಿಗೆ ಇತರ ಸನ್ಮಾನಿತರು



ಕವಿ ಜಯಂತಿ ಮತ್ತು ಶ್ರೀ ವಾಗ್ದೇವಿ ಪ್ರಶಸ್ತಿ ಸಮಾರಂಭದಲ್ಲಿ ಪ್ರಶಸ್ತಿ ಪುರಸ್ಕೃತರಾದ ಹಿರಿಯ ಗಮಕಿ
ಶ್ರೀಮತಿ ಜಯಲಕ್ಷ್ಮೀ ಇನಾಂದಾರ್ ಅವರೊಂದಿಗೆ ಹಿರಿಯ ಗಣ್ಯರು



ಮೈಸೂರಿನ ಪರಂಪರೆ ವತಿಯಿಂದ ವಿಶಿಷ್ಟವಾಗಿ ನೆರವೇರಿದ ಗಮಕ ರೂಪಕ ಕಾರ್ಯಕ್ರಮ

## ಕರ್ನಾಟಕ ಗಮಕ ಕಲಾ ಪರಿಷತ್ತು ಆಯೋಜಿಸಿದ್ದ 'ಗಮಕ ರೂಪಕ ಕಾರ್ಯಾಗಾರದ' ದೃಶ್ಯಗಳು









ತೆರೆದ ಅಂಚೆ

ಗೆ,

____________________________

____________________________

____________________________

ಇಂದ,
**ಕರ್ನಾಟಕ ಗಮಕ ಕಲಾ ಪರಿಷತ್ತು (ರಿ)**
2ನೇ ಮಹಡಿ, ಬಿ.ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ,
3ನೇ ಮುಖ್ಯರಸ್ತೆ, ಎನ್.ಆರ್. ಕಾಲೋನಿ, ಬೆಂಗಳೂರು-560 019.